

# ಸಿಹಿ ಕಹಿ


ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 281 | Tuesday 22-07-2025 | E-mail : maruti.b.hosamani76@gmail.com | Page: 4 | Price : Rs. 1/-


## ಪತ್ರಕರ್ತರಿಗೆ ಸರ್ಕಾರದ ಮೂಲ ಸೌಲಭ್ಯ ನೀಡಲಿ: ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ





**ಸಿಹಿ ಕಹಿ ಸುದ್ದಿ, ಕೂಡ್ಲಿಗಿ :** ಕರ್ನಾಟಕ ನಿರತ ಪತ್ರಕರ್ತರ ಧ್ವನಿ ತಾಲೂಕ ಘಟಕದ ವತಿಯಿಂದ ಹಾಗೂ ಎಸ್.ಎಸ್ ನಾರಾಯಣ ಸೂಪರ್ ಸ್ಪೆಷಲಿಸ್ಟ್ ಸೆಂಟರ್ ದಾವಣಗೆರೆ ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ ಇವರ ಜಂಟಿ ಸಹ ಭಾಗಿತ್ವದಲ್ಲಿ ಕೂಡ್ಲಿಗಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಪತ್ರಿಕೆ ಮತ್ತು ಪತ್ರಕರ್ತರ ಸಂಕಷ್ಟವನ್ನು ಸರ್ಕಾರ ಅರಿಯಬೇಕು. ಪತ್ರಕರ್ತರಿಗೆ ಸರ್ಕಾರವು ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಪತ್ರಕರ್ತರಿಗೆ ನೀಡಿಲ್ಲ. ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡ ಬೇಕಾಗಿದೆ. ಪತ್ರಕರ್ತರು ಸಾರ್ವಜನಿಕ ವರದಿ ಮಾಡಲು ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ವ್ಯವಸ್ಥೆಯನ್ನು ಕಲ್ಪಿಸ ಬೇಕಿತ್ತು. ಸರ್ಕಾರ ಹಾಗೂ ರಾಜಕಾರಣಿಗಳು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಇದು ಸಲ್ಲದು ಪತ್ರಕರ್ತರಿಗೆ ಎಷ್ಟೊಂದು ನೋವುಗಳಿದ್ದರೂ ವರದಿ ಮಾಡಲು ಹಿಂಜರಿಯುವುದಿಲ್ಲ. ಹಿಂಗಾದಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡುವ ಮೂಲಕ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡ ಬೇಕಾಗುತ್ತದೆ ಎಂದು ಕಾ.ನಿ. ಪ ಧ್ವನಿ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಕಾವಲಿ ಶಿವಪ್ಪ ನಾಯಕ ಮಾತನಾಡಿ ಪತ್ರಕರ್ತರು ಸುದ್ದಿಗಳನ್ನು ಪ್ರಸಾರ ಮಾಡುವುದರ ಜೊತೆಗೆ ಪತ್ರಿಕಾ ದಿನಾಚರಣೆಯ ಮೂಲಕ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ ಮಾಡಿರುವುದು ಸಾರ್ವಜನಿಕರಿಗೆ ಉಪಯುಕ್ತವಾಗಿದೆ ಎಂದರು. ಡಿ.ವೈ.ಎಸ್.ಪಿ ಮಲ್ಲೇಶ್ ದೊಡ್ಮನಿ ಮಾತನಾಡಿ ಪತ್ರಕರ್ತರು ಅತ್ಯಂತ ಒತ್ತಡದ ಬದುಕಿನಲ್ಲಿ ಸಾಗುತ್ತಿದ್ದು. ಸಾರ್ವಜನಿಕರಿಗೆ ಉಪಯುಕ್ತವಾಗುವ ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಲಿ ಎಂದರು.

ಡಿ.ಹೆಚ್.ಓ ಡಾ, ಶಂಕರ್.ನಾಯ್ಕ್ ಮಾತನಾಡಿ ಸಾರ್ವಜನಿಕರು ತಮ್ಮ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಹಣ್ಣುಗಳು ಹಸಿ ತರಕಾರಿ ಬಳಸುವುದರಿಂದ ಉತ್ತಮ ಆರೋಗ್ಯ ಇರುತ್ತದೆ. ತಮ್ಮ ಆರೋಗ್ಯದಲ್ಲಿ ಖರೀದ ಪದಾರ್ಥಗಳು ಬೇಕರಿ ದಿನಸುಗಳು ಹೆಚ್ಚು ಬಳಸ ಬಾರದೆಂದು ಸಲಹೆ ನೀಡಿದರು. ಆರೋಗ್ಯ ಶಿಬಿರದಲ್ಲಿ 250 ಹೆಚ್ಚು ಜನ ತಪಾಸಣೆ ಮಾಡಿಸಿ ಕೊಂಡರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ತಾಲೂಕ ಘಟಕದ ಅಧ್ಯಕ್ಷ ಬಾಣದ ಶಿವಮೂರ್ತಿ, ಶಾಸಕರ ಆಪ್ತ ಸಹಾಯಕರಾದ ಮರುಳು ಸಿದ್ದಪ್ಪ, ದಿನಕರ, ತಾಲೂಕ ಆರೋಗ್ಯ ಅಧಿಕಾರಿ ಡಾ, ಪ್ರದೀಪ್.ಎಸ್ ಪಿ, ಸೈಯದ್ ಶಕುರ್ ಪಂಚಾಯಿತಿ ಸದಸ್ಯರು ಸ್ಥಾಯಿ ಸಮಿತಿ ಅಧ್ಯಕ್ಷರು ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷರಾದ ಸಾಲುಮನೆ ರಾಘವೇಂದ್ರ, ಊರಮ್ಮ, ಸರಸ್ವತಿ ರಾಘವೇಂದ್ರ ಪಟ್ಟಣ ಪಂಚಾಯತಿ ಸದಸ್ಯರು, ಸುನಿಲ್ ಗೌಡ ತಾಲೂಕು ಅಧ್ಯಕ್ಷರು ವೀರಶೈವ ಮಹಾಸಭಾ ಕೂಡ್ಲಿಗಿ ಘಟಕ, ರೆಹಮಾನ್ ಖಾನ್ ಸಮಾಜ ಸೇವಕರು, ಡಾ. ರಾಕೇಶ್, ಎಸ್ಎಸ್ ನಾರಾಯಣ ಹೆಲ್ತ್ ಸೂಪರ್ ಸ್ಪೆಷಲಿಸ್ಟ್ ಆಸ್ಪತ್ರೆ ದಾವಣಗೆರೆ ಸಿಬ್ಬಂದಿಗಳಾದ ಗುಡ್ಡಪ್ಪ, ಕಾರ್ತಿಕ್, ಅಂಜಿನಪ್ಪ, ಸೃಷ್ಟಿ, ಲಾವಣ್ಯ, ವಾತ್ಸಲ್ಯ, ಕಾ.ನಿ.ಪ ಧ್ವನಿ ಪದಾಧಿಕಾರಿಗಳಾದ ಬಿ.ರಾಘವೇಂದ್ರ, ಮಂಜುನಾಥ, ಅನಿಲ್ ಕುಮಾರ್, ನಾರಾಯಣ, ಬಣಕಾರ್ ಮೂಗಪ್ಪ, ರಮೇಶ್, ವಸಂತ, ತಿಪ್ಪೇಸ್ವಾಮಿ, ಕೆ.ಎಸ್ ವೀರೇಶ್, ವಾಗೀಶ್ ಮೂರ್ತಿ, ಸೇರಿದಂತೆ ಸಾರ್ವಜನಿಕರು ಇತರರು ಉಪಸ್ಥಿತರಿದ್ದರು ಇತರರನ್ನು ಸನ್ಮಾನಿಸಿ ಗೌರವಿಸಲಾಯಿತು ಎಂದು ವರದಿಯಾಗಿದೆ.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್ ವೀರೇಶ್.ಕೆ.ಹೊಸಹಳ್ಳಿ**

## ಸಜ್ಜನ ವಿದ್ಯಾವರ್ಧಕದಲ್ಲಿ ಕೆಂಪು ದಿನ ಆಚರಣೆ





**ಸಿಹಿ ಕಹಿ ಸುದ್ದಿ,**
**ಇಲಕಲ್ಲ :** ಇಲ್ಲಿನ ಸಜ್ಜನ ವಿಧ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಸಜ್ಜನ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ರೆಡ್ ಡೇ ದಿವಸವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು, ಪುಟ್ಟ ಮಕ್ಕಳು, ವಿಧ್ಯಾರ್ಥಿಗಳು ಮತ್ತು ಶಾಲಾ ಶಿಕ್ಷಕರು ಸಂಪೂರ್ಣವಾಗಿ ಕೆಂಪುಡುಗೆಯಲ್ಲಿ ಕಂಗೊಳಿಸಿದರು, ಮತ್ತು ಶಾಲಾ ಮಕ್ಕಳು ಉಪಹಾರದ ರೂಪದಲ್ಲಿ ಕೆಂಪು ಬಣ್ಣದ ವಿವಿಧ ಫಲಗಳನ್ನು ತಂದು "ಕೆಂಪು ದಿನ" ವನ್ನು ವೈವಿಧ್ಯಮಯ ರೀತಿಯಲ್ಲಿ ಆಚರಿಸಿದರು. ಇಡೀ ಶಾಲಾ ಆವರಣ ಕೆಂಪು ಹೂವು ಮತ್ತು ಕೆಂಪು ಬಲೂನುಗಳಿಂದ ಸಿಂಗರಿಸಲಾಗಿತ್ತು, ಈ ಸಂದರ್ಭದಲ್ಲಿ ಶಾಲೆಯ ಆಡಳಿತಾಧಿಕಾರಿ ಕೆ.ಡಿ ವಂದಕುದರಿ, ಮುಖ್ಯ ಗುರುಮಾತೆ ಆರ್.ಆರ್ ಕುಲಕರ್ಣಿ, ಮೇಘಾ ಗಡೇದಗೌಡರ, ರಜೀಯಾ ಕೊಡಕೇರಿ,ಪಿಗುಡಿಯಾಳ,ಆರ್‌ನಾಗೂರ,ಜಿಕಲ್ಲುಗುಡಿ, ಸ್ವಾತಿ ಚಲವಾದಿ, ಮುಂತಾದವರು ಪಾಲ್ಗೊಂಡಿದ್ದರು, ಈ ವಿಶಿಷ್ಟಕಾರ್ಯಕ್ರಮಕ್ಕೆಸಂಸ್ಥೆಯಅಧ್ಯಕ್ಷರಾದ ಸಂಜಯ ಕಂಪ್ಲಿ ಸಿಬ್ಬಂದಿ ವರ್ಗವನ್ನು ಅಭಿನಂದಿಸಿದ್ದಾರೆ ಎಂದು ವರದಿಯಾಗಿದೆ.

**ಜಿಲ್ಲಾ ಮಟ್ಟದ ವಿಶೇಷ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಅಬ್ದುಲ್.ಗಫಾರ್.ತಹಶೀಲ್ದಾರ್. ಇಲಕಲ್ಲ.ಬಾಗಲಕೋಟ**

# ಸಂವಿಧಾನ ಮತ್ತು ಅಂಬೇಡ್ಕರ್ ಸಾಮಾಜಿಕ ಸಮಾನತೆಗಾಗಿ ಜನ ಆಂದೋಲನ ಸಮಾವೇಶ 22 ಕ್ಕೆ ಕಾರ್ಯಕ್ರಮ



**ಸಿಹಿ ಕಹಿ ಸುದ್ದಿ,**
**ವಿಜಯಪುರ :** ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊ, ಬಿ.ಕೃಷ್ಣಪ್ಪ ಸ್ಥಾಪಿತ ಜಿಲ್ಲಾ ಸಮಿತಿ ವಿಜಯಪುರ ವತಿಯಿಂದ ಸಂವಿಧಾನ ಮತ್ತು ಅಂಬೇಡ್ಕರ್ ಸಾಮಾಜಿಕ ಸಮಾನತೆಗಾಗಿ ಜನ ಆಂದೋಲನ ಸಮಾವೇಶ ದಿನಾಂಕ 22-07-2025 ಮಂಗಳವಾರ ಮಧ್ಯಾಹ್ನ 12.30 ಗಂಟೆಗೆ ಸಮಾವೇಶ ಕಂದಗಲ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ಜರಗುವುದು ಮೆರವಣಿಗೆ ಬೆಳಿಗ್ಗೆ 11.00 ಗಂಟೆಗೆ ಬೌದ್ಧ ವಿಹಾರದಿಂದ ಹೊರಟು ನಗರದ ಪ್ರಮುಖ ರಸ್ತೆಗಳ ಮಾರ್ಗವಾಗಿ ರಂಗ ಮಂದಿರ ತಲುಪುವುದು. ಸಮಾವೇಶದ ಕುರಿತು ರಾಜ್ಯ ಸಂಘಟನಾ ಸಚಾಲಕರಾದ ರಮೇಶ ಆಸಂಗಿ ಮಾತನಾಡಿ ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು 77 ವರ್ಷವಾಯಿತು. ದೇಶವು ಲಿಖಿತವಾದ ಸಂವಿಧಾನವನ್ನು ಅನುಷ್ಠಾನಕ್ಕೆ ತಂದು 75 ವರ್ಷಗಳಾಯಿತು. ಸಂವಿಧಾನ ಶಿಲ್ಪಿ ಡಾ, ಬಿ.ಆರ್. ಅಂಬೇಡ್ಕರ್ ರವರು ತಮ್ಮ ಪರಿಕಲ್ಪನೆಯ ಸಂವಿಧಾನದಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯ ಸ್ವಾತಂತ್ರ್ಯ ಭಾರತದ ಕನಸುಗಳನ್ನು ನನಸು ಮಾಡುವ ದಿಸೆಯಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯಾತಿತ ಸ್ವರೂಪ, ಭ್ರಾತೃತ್ವ ಹಾಗೂ ಒಕ್ಕೂಟ ಪ್ರಭುತ್ವಗಳನ್ನು, ಭದ್ರವಾದ ಅಡಿಪಾಯ ಹಾಕಿ ರಚಿಸಿದ್ದಾರೆ. ಈ ಮೂಲಭೂತವಾದ ಆಶಯಗಳಿಗೆ ಧಕ್ಕೆ ಉಂಟು ಮಾಡುವ ಯಾವುದೇ ಕೃತ್ಯಗಳನ್ನು ಇಡೀ ಅಖಂಡ ಭಾರತದಲ್ಲಿ ಯಾರು ಸಹಿಸಲು ಸಾಧ್ಯವಿಲ್ಲ. ಆದರೆ ವಿಶ್ವದಲ್ಲಿ ಅತ್ಯಂತ ಬಲಿಷ್ಠವಾದೆ ಇಂತಹ ಮಹತ್ವದ ಸಂವಿಧಾನವನ್ನು ಹಾಡು ಹಗಲಲ್ಲೆ ದೇಶದ ರಾಜಧಾನಿ ನವ ದೆಹಲಿಯಲ್ಲಿ ಕೆಲವು ಪೂರ್ವಾಗ್ರಹ ಪೀಡಿತ ಮನಸ್ಸಿನ ಜನರು ಸುಟ್ಟು ಹಾಕಿದ್ದಾರೆ ಮತ್ತು ಬಾಬಾ ಸಾಹೇಬ ಡಾ, ಅಂಬೇಡ್ಕರ ರವರ ವಿರುದ್ದ ಘೋಷಣೆಗಳನ್ನು ಕೂಗುತ್ತಾರೆ ಎಂದರೆ, ಇವರಿಗೆ ಈ ಧೈರ್ಯ ಎಲ್ಲಿಂದ ಬಂತು? ಇದರ ಹಿಂದಿರುವ ಶಕ್ತಿ ಯಾವುದಿರಬಹುದು? ಇದನ್ನು ನೋಡಿ ಕೊಂಡು ಸರಕಾರಗಳು ಮೌನವಾಗಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜ್ಞಾವಂತ ನಾಗರೀಕರು ತಲೆ ತಗ್ಗಿಸುವಂತೆ ಮಾಡಿದೆ. ಮಾತ್ರವಲ್ಲದೆ. ಸ್ವತಂತ್ರ ಭಾರತದಲ್ಲಿ ಇಂದೆಂದೂ ಕಂಡಿರಿಯದಂತಹ ಹೊಸ ಸವಾಲು ಎದುರಾಗಿರುವುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಇದು ದೇಶದ ಭಾವೈಕ್ಯತೆ ಮತ್ತು ಸಮಗ್ರತೆಗೆ ಅಪಾಯದ ಮುನ್ಸೂಚನೆ ಯಾಗಿದೆ. ಇಂತಹ ಅಪಾಯಕಾರಿ ಸನ್ನಿವೇಶದಲ್ಲಿ ಎಲ್ಲಾ ದೇಶ ಪ್ರೇಮಿಗಳು ಒಗ್ಗಟ್ಟಾಗಿ ಪರಿಸ್ಥಿತಿಯನ್ನು ಎದುರಿಸ ಬೇಕಾಗಿದೆ. ಇದು ನಮ್ಮೆಲ್ಲರ ಮುಂದಿರುವ ತುರ್ತು ಕರ್ತವ್ಯವಾಗಿದೆ.

ಕರ್ನಾಟಕದಲ್ಲಿ ದಲಿತ ಚಳುವಳಿಯು ಪ್ರಾರಂಭವಾದಾ ಗಿನಿಂದಲೂ ಅಂಬೇಡ್ಕರ್ ಚಿಂತನೆಯನ್ನು ತನ್ನ ಮೂಲಾಧಾರವಾಗಿಸಿ ಕೊಂಡಿದೆ. ಅಸ್ಪೃಶ್ಯತಾ ಜಾತಿ ವಿನಾಶ, ಸಮಾನತೆ ಹಕ್ಕು, ಪ್ರಜಾಸತ್ತಾತ್ಮಕ ಆಡಳಿತ, ಜಾತ್ಯಾತೀತ ನಿಲುವು, ಅಹಿಂಸಾತ್ಮಕ ಹೋರಾಟದ ವಿಧಾನ ಸ್ವಾವಲಂಬಿ ಬದುಕಿನ ಭರವಸೆ. ಇತ್ಯಾದಿಯಾಗಿ ಅಂಬೇಡ್ಕರ್ ಮುಂದಿಟ್ಟ ತತ್ವಗಳನ್ನು ಕರ್ನಾಟಕ ದಲಿತ ಚಳವಳಿ ಅನುಸರಿಸಿ ಕೊಂಡು ಬಂದಿದೆ. ನಮ್ಮ ದೇಶ ಯಾವುದೇ ಒಂದು ಧರ್ಮಕ್ಕೆ ಮೀಸಲಾಗಿಲ್ಲ ನಮ್ಮದು ಸರ್ವ ಧರ್ಮಗಳ ದೇಶವಾಗಿದೆ. ಅಲ್ಪಸಂಖ್ಯಾತರ ಮೇಲೆ ಬಹು ಸಂಖ್ಯಾತರರು ಯಾವುದೇ ಕಾರಣಕ್ಕೆ ಸವಾರಿ ಮಾಡ ಬಾರದೆಂದು ಧಾರ್ಮಿಕ ಅಲ್ಪಸಂಖ್ಯಾತರಿಗೆ ಕೆಲವು ವಿಶೇಷ ಸವಲತ್ತುಗಳ ಅವಕಾಶಗಳನ್ನು ಸಂವಿಧಾನ ಕಲ್ಪಿಸಿದೆ. ಇಂತಹ ಕೆಲವು ಕಾರಣಗಳಿಂದಾಗಿ ಸಂವಿಧಾನವನ್ನು ಸುಡುವ ಮಟ್ಟಕ್ಕೆ ತಲುಪಲಾಗಿದೆ ಎಂದು ಭಾವಿಸಬಹುದು. ನಮ್ಮ ಸಂವಿಧಾನದಲ್ಲಿ ಮಾನವೀಯ ಹಾಗೂ ಮನುಷ್ಯತ್ವದ ಅಂಶಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ. ಇದರಲ್ಲಿ ಸಾಮಾಜಿಕ ನ್ಯಾಯ ಪ್ರಮುಖ ಸ್ಥಾನ ಹೊಂದಿದೆ. ಎಂದರು ಬೆಳಗಾವಿ ವಿಭಾಗೀಯ ಸಂಚಾಲಕರಾದ ವಿನಾಯಕ್ ಗುಣಸಾಗರ ಮತ್ತು ಜಿಲ್ಲಾ ಸಂಚಾಲಕರಾದ ಅಶೋಕ ಚಲವಾದಿ ಮಾತನಾಡಿ, ದಲಿತರಿಗೆ, ಹಿಂದುಳಿದವರಿಗೆ ಮತ್ತು ಬಡವರು, ತುಳಿತಕ್ಕೆ, ಶೋಷಣೆಗೆ ಸಿಲುಕಿರುವ ಅಸಹಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ, ಇವೆಲ್ಲಾ ಅಂಬೇಡ್ಕರ್ ರವರ ಪರಿಕಲ್ಪನೆ ಗಳಾಹಗಿವೆ. ಇದನ್ನು ಸಂವಿಧಾನ ಕುರಿತಂತೆ ಪಾಠ ಹೇಳ ಬೇಕಾಗಿದೆ. ದೇಶದ ಬಹುತ್ವಕ್ಕೆ ಎಂದಿನಿಂದಲೂ ವಿರುದ್ಧವಾಗಿರುವ ಆರ್.ಎಸ್.ಎಸ್, ಯಾವಾಗಲೂ ಮನುಷ್ಯನ ಆಹಾರ, ಬಟ್ಟೆ ಆಚರಣೆ ಹಾಗೂ ಅವರ ಆಲೋಚನೆಗಳ ವಿಷಯದಲ್ಲಿ ನಿಯಂತ್ರಣ ಸಾಧಿಸಲು ಯತ್ನಿಸುತ್ತಲೆ ಇದೆ. ಆದರೆ ಬಾಬಾಸಾಹೇಬ ಅಂಬೇಡ್ಕರರು ನೀಡಿರುವ ಈ ದೇಶದ ಆತ್ಮವಾದ ಸಂವಿಧಾನವು ಎಷ್ಟು ಗಟ್ಟಿಯಾಗಿದೆ ಯೆಂದರೆ ಇಂತಹ ನೂರು ದಾಳಿಗಳು ಮತ್ತು ಕುತಂತ್ರಗಳನ್ನು ಅದು ಇನ್ನೂ ಕೋಟಿ ಬಾರಿ ಎದುರಿಸಿ ನಿಲ್ಲುವಷ್ಟು ಸಮರ್ಥವಾಗಿದೆ. ಇತ್ತೀಚಿಗೆ ಬಾಬಾ ಸಾಹೇಬ ಅಂಬೇಡ್ಕರರ ವಿಷಯದಲ್ಲಿ ಪ್ರೀತಿ ತೋರಿಸುವ ನಾಟಕ ಮಾಡುತ್ತಿರುವ ಆರ್.ಎಸ್.ಎಸ್ ನವರು ಡಾ, ಬಾಬಾ ಸಾಹೇಬ ಅಂಬೇಡ್ಕರರ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಮಾತನಾಡುತ್ತಿರುವ ದತ್ತಾತ್ರೇಯ ಹೊಸಬಾಳೆ ಅವರನ್ನು ಆರ್.ಎಸ್.ಎಸ್ ನಿಂದ ಹೊರ ಹಾಕಿ ಅವರ ಮೇಲೆ ಕ್ರಮ ಜರುಗಿಸಲಿ, ಇಲ್ಲವಾದರೆ ತಾವೊಬ್ಬ ದೇಶದ್ರೋಹಿ ಸಂಘಟನೆ ಎಂಬುದನ್ನು ಬಹಿರಂಗವಾಗಿ ಒಪ್ಪಿ ಕೊಳ್ಳಬೇಕು. ಈ ಹಿನ್ನಲೆಯಲ್ಲಿ ಸಂವಿಧಾನ ಮತ್ತು ಅಂಬೇಡ್ಕರ ಸಾಮಾಜಿಕ ಸಮಾನತೆಗಾಗಿ ಜನ ಆಂದೋಲನ ಸಮಾವೇಶವನ್ನು ದಿನಾಂಕ:- 22/07/2025 ರಂದು ಮಂಗಳವಾರ ಬೌದ್ಧ ವಿಹಾರದಿಂದ ಸಕಲ ವಾದ್ಯಗಳೊಂದಿಗೆ ಬೆಳಿಗ್ಗೆ ಹನ್ನೊಂದು ಘಂಟೆಗೆ ಮೇರವಣಿಗೆ ಹೊರಟು ವಿವಿಧ ನಗರದ ಪ್ರಮುಖ ರಸ್ತೆಗಳಲ್ಲಿ ಹೊರಟು ಕಂದಗಲ ಹನುಮಂತರಾಯ ಮಂದಿರದಲ್ಲಿ 12.30 ಕ್ಕೆ ಸಮಾವೇಶವನ್ನು ಹಮ್ಮಿ ಕೊಳ್ಳಲಾಗಿದೆ ಈ ಸಮಾವೇಶಕ್ಕೆ ದಿವ್ಯ ಸಾನಿಧ್ಯವನ್ನು ಪ.ಪೂ ಶ್ರೀ.ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ. ಉರಿಲಿಂಗ ಪೆದ್ದಿಮಠ ಸಂಸ್ಥಾನ ಮೈಸೂರು. ಭಾಗವಹಿಸುವರು

ಸಭೆ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಸತೀಶ ಜಾರಕಿಹೊಳಿ ಮಾನ್ಯ ಲೋಕೋಪಯೋಗಿ ಸಚಿವರು, ಕರ್ನಾಟಕ ಸರ್ಕಾರ. ಜ್ಯೋತಿ ಬೆಳಗಿಸುವವರು ಸನ್ಮಾನ್ಯ ಡಾ, ಎಂ.ಬಿ ಪಾಟೀಲ್ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ. ಮಾನ್ಯ ಶ್ರೀ ರಮೇಶ ಆಸಂಗಿ ರಾಜ್ಯ ಸಂಘಟನಾ ಸಂಚಾಲಕರು ಇವರಿಗೆ ಕರ್ನಾಟಕ ಸರ್ಕಾರದ 2011 ನೇ. ಸಾಲಿನ ಡಾ, ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪುರಸ್ಕುತರು ಮತ್ತು 2025 ನೇ. ಸಾಲಿನ ಡಾ, ಬಾಬು ಜಗಜೀವನರಾಮ ಪ್ರಶಸ್ತಿ ಪುರಸ್ಕೃತರು. ಇವರಿಗೆ ವಿಶೇಷ ಸನ್ಮಾನಿಸಲಾಗುವುದು. ವಿಶೇಷ ಉಪನ್ಯಾಸಕರಾಗಿ ಶ್ರೀ ಡಾ, ಸುಜಾತಾ ಚಲವಾದಿ ಶಂಕರ ದೇವನೂರ ಆಧ್ಯಾತ್ಮ ಚಿಂತಕರು, ಮೈಸೂರು, ಹಾಗೂ ಸಹಾಯಕ ಪ್ರಾಧ್ಯಾಪಕರು ಎಸ್.ಕೆ.ಕಾಲೇಜು, ತಾಳಿಕೋಟಿ. ಉಪನ್ಯಾಸ ನೀಡುವರು ಮೆರವಣಿಗೆ ಉದ್ಘಾಟನೆಯನ್ನು ಪ್ರೊ. ರಾಜು ಆಲಗೂರ ಮಾಜಿ ಶಾಸಕರು, ನಾಗಠಾಣ. ಸಭೆಯ ಅಧ್ಯಕ್ಷತೆಯನ್ನು ಶ್ರೀ ಹೆಣ್ಣೂರು ಶ್ರೀನಿವಾಸ ರಾಜ್ಯ ಸಂಚಾಲಕರು, ಬೆಂಗಳೂರು ವಹಿಸಿ ಕೊಳ್ಳುವವರು ಮುಖ್ಯ ಆತಿಥಿಗಳಾಗಿ ಶ್ರೀ ಸಂಗಮೇಶ ಬಬಲೇಶ್ವರ ಅಧ್ಯಕ್ಷರು, ಶರಣಪ್ಪ ಸುಣಗಾರ ಮಾಜಿ ಶಾಸಕರು ಸಿಂದಗಿ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಧಾರವಾಡ, ಶ್ರೀ ಅಶೋಕ ಮನಗೂಳಿ ಮಾನ್ಯ ಶಾಸಕರು, ಸಿಂದಗಿ, ಶ್ರೀ ಪ್ರಭುಗೌಡ ಪಾಟೀಲ್ (ಲಿಂಗದಳ್ಳಿ) ಕೆ.ಪಿ.ಸಿ.ಸಿ. ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ವಿಜಯಪುರ. ಶ್ರೀ ಹಮೀದ್ ಮುಶ್ರಿಪ್ ಜಿಲ್ಲಾ ಕಾಂಗ್ರೇಸ್ ಮುಖಂಡರು ಶ್ರಿ ರಿಷಿ ಆನಂದ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ ವಿಜಯಪುರ ಶ್ರೀ ಲಕ್ಷ್ಮಣ ನಿಂಬರಗಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ವಿಜಯಪುರ. ಶ್ರೀ ಸೋಮಲಿಂಗ ಗೆಣ್ಣೂರ ಹೆಚ್ಚುವರಿ ಜಿಲ್ಲಾಧಿಕಾರಿಗಳು, ವಿಜಯಪುರ, ಶ್ರೀ ಮಹೇಶ ಪೊತ್ದಾರ್ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ವಿಜಯಪೂರ. ಪ್ರಾಸ್ಥಾವಿಕವಾಗಿ ಶ್ರೀ ವಿನಾಯಕ ಗುಣಸಾಗರ ಬೆಳಗಾವಿ ವಿಭಾಗ ಸಂಚಾಲಕರು, ಮಾತನಾಡುವವರು. ಸ್ವಾಗತವನ್ನು ಶ್ರೀ ಅಶೋಕ ಚಲವಾದಿ ಜಿಲ್ಲಾ ಸಂಚಾಲಕರು ವಿಜಯಪುರ ಮಾಡುವರು. ಆದುದರಿಂದ ನಾವೆಲ್ಲರೂ ಸುರಕ್ಷಿತವಾಗಿ ಒಗ್ಗಟ್ಟಿನಿಂದ ಬದುಕಲು ಸಂವಿಧಾನದ ಆಶಯಗಳನ್ನು ರಕ್ಷಿಸಬೇಕು. ಅದಕ್ಕಾಗಿ ಹೊಸ ಸವಾಲುಗಳನ್ನು ಎದುರಿಸಲು ಆಂದೋಲನವನ್ನು ಕಟ್ಟಿ ಬೆಳಸಬೇಕಾದ ಅಗತ್ಯ ತುರ್ತಾಗಿ ಆಗಬೇಕಾಗಿದೆ. ಈ ಹಿನ್ನಲೆಯಲ್ಲಿ ಅಂಬೇಡ್ಕರ ಮತ್ತು ಸಂವಿಧಾನ ಎಂಬ ಮಹತ್ವದ ವಿಷಯದ ಮೇಲೆ ಸಾಮಾಜಿಕ ಸಮಾನತೆಗಾಗಿ ಜನ ಆಂದೋಲನ ಸಮಾವೇಶವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಮಹಾತ್ಮ ಪ್ರೊ, ಬಿ.ಕೃಷ್ಣಪ್ಪ ಬಣ) ಜಿಲ್ಲಾ ಸಮಿತಿ, ವಿಜಯಪುರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸುಮಾರು 5000 ಕ್ಕೂ ಹೆಚ್ಚು ಜನ ಸೇರುವರು. ಜನ್ನರಲ್ಲಿ ಜಾಗೃತಿ ಒಗ್ಗಟ್ಟು ಹೋರಾಟ ರೂಪಿಸಲು ಸಮಿತಿಯು ಮುಂದಾಗಿದೆ. ಪ್ರಗತಿಪರರು, ಸಕ್ರಿಯವಾಗಿ ಕಾರ್ಯಕರ್ತರು, ಅಂಬೇಡ್ಕರವಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸ ಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ ವಿಜಯಪುರ ತಮ್ಮಲ್ಲಿ ಸಮಿತಿಯು ಮನವಿ ಮಾಡಿ ಕೊಳ್ಳುತ್ತದೆ. ಎಂದರು ಈ ಸಂದರ್ಭದಲ್ಲಿ ರೇಣುಕಾ ಮಾದರ ರಾಜ್ಯ ಮಹಿಳಾ ಸಂಚಾಲಕರು ಯಶೋದಾ ಮೇಲಿನಕೆರಿ ಮಹಿಳ ಜಿಲ್ಲಾ ಸಂಚಾಲಕರು ಶರಣು ಸಿಂದೆ ಜಿಲ್ಲಾ ಸಂಘಟನಾ ಸಂಚಾಲಕರು ಪ್ರಕಾಶ ಗುಡಿಮನಿ ಜಿಲ್ಲಾ ಸಂಘಟನಾ ಸಂಚಾಲಕರು ಲಕ್ಕಪ್ಪ ಬಡಿಗೇರ್ ಜಿಲ್ಲಾ ಸಂಘಟನಾ ಸಂಚಾಲಕರು ಪರಶುರಾಮ ದಿಂಡವಾರ ಜಿಲ್ಲಾ ಸಂಘಟನಾ ಸಂಚಾಲಕರು ಅನೀಲಕೊಡತೆಜಿಲ್ಲಾಸಂಘಟನಾಸಂಚಾಲಕರು ಬಿ,ಎಸ್ ತಳವಾರ ಕಾರ್ಯಕಾರಿ ಸಮಿತಿ ಸದಸ್ಯರ (ಸುರೇಶ ನಡಗಡ್ಡಿ) ಜಿಲ್ಲಾ ವಿದ್ಯಾರ್ಥಿ ಒಕ್ಕೂಟ ಸಂಚಾಲಕರು ಸುಭದ್ರಾ ಮೇಲಿನಮನಿ ಮಹಿಳಾ ಜಿಲ್ಲಾ ಸಂಘಟನಾ ಸಂಚಾಲಕರು ಚಂದ್ರಕಲಾ ಮಸಳಿಕೇರಿ ಮಹಿಳಾ ಜಿಲ್ಲಾ ಸಂಘಟನಾ ಸಂಚಾಲಕರು ದೇವರ ಹಿಪ್ಪರಗಿ, ರವಿ ಮ್ಯಾಗೇರಿ, ತಾಲೂಕಾ ಸಂಚಾಲಕರು ಬ.ಬಾಗೇವಾಡಿ ರಾಜಕುಮಾರ ಸಿಂದಗೇರಿ,, ತಾಲೂಕಾ ಸಂಚಾಲಕರು ಮಂಜುನಾಥ ಏಂಟಮನ,,ತಾಲೂಕಾ ಸಂಚಾಲಕರು ಸಿಂದಗಿ, ಶಿವು ಮೂರಮನ,, ತಾಲೂಕಾ ಸಂಚಾಲಕರು ಇಂಡಿ, ಲಕ್ಷ್ಮಣ ಹಾಲಿಹಾಳ,, ತಾಲೂಕಾ ಸಂಚಾಲಕರು ನಿಡಗುಂದಿ, ಸಾಯಿನಾಥ ಬನಸೋಡೆ, ತಾಲೂಕಾ ಸಂಚಾಲಕರು ಚಡಚಣ, ರವೀಚಂದ್ರ ಚಲವಾದಿ,, ತಾಲೂಕಾ ಸಂಚಾಲಕರು ಕೋಲಾರ, ಬಸವರಾಜ ಹೊಸಮನಿ,, ತಾಲೂಕಾ ಸಂಚಾಲಕರು ಆಲಮೇಲ, ಸಿದ್ದು ಬಾರಿಗಿಡದ,, ತಾಲೂಕಾ ಸಂಚಾಲಕರು ತಾಳಿಕೋಟಿ ಲಕ್ಷ್ಮಿಕಾಂತ ಏಳಗಿ ಚಡಚಣ ಸಂಚಾಲಕರು ಬೀರಪ್ಪ ಕವಟಗಿ ಇಂಡಿ ದಯಾನಂದ ಕೋಟಿ ಮತ್ತಿತರರು ಉಪಸ್ಥಿತರಿದ್ದರು.

**ವರದಿ:ಅಶೋಕ್.ಚಲವಾದಿ ಮೊ ನಂ 9972504615**

# ಪರಿಸರ ಪ್ರಜ್ಞೆ ಮೆರೆದ ಪ್ರಾರ್ಥನಾ ಕಾಲೇಜು ವಿದ್ಯಾರ್ಥಿಗಳು



**ಬಾಗಲಕೋಟೆ:** ರಜೆಯ ಮಜಾ ಬಿಟ್ಟು ಪರಿಸರ ಸಂರಕ್ಷಣೆಯ ಹಿತಚಿಂತನೆ ಮೆರೆದಿರುವ ಪ್ರಾರ್ಥನಾ ಪಿಯು ಕಾಲೇಜು ವಿದ್ಯಾರ್ಥಿಗಳು ಭಾನುವಾರ ನಗರದ ನವನಗರ ಸೆಕ್ಟರ್ ನಂ.16ರ ಗಾರ್ಡನ್ ಜಾಗೆಯಲ್ಲಿ ಗಿಡ ನೆಟ್ಟು, ನೀರಾವರಿ ಮಾಡಿ, ತಂತಿ ಬೇಲಿ ಅಳವಡಿಸುವ ಮೂಲಕ ಮಾದರಿಯಾದರು. ಇತ್ತೀಚೆಗೆ ಹುಟ್ಟಿಕೊಂಡ 'ಪರಿಸರ ಬಳಗ'ವು ನಗರವನ್ನು ಹಸಿರುಗೊಳಿಸುವ ಉದ್ದೇಶದಿಂದ ಸದ್ದಿಲ್ಲದೆ ಕಾರ್ಯತತ್ಪರವಾಗಿದೆ. ಈ ಬಳಗವು ಸ್ಥಳೀಯ ನಾಗರಿಕರಿಗೆ ಭೇಟಿಯಾಗಿದ್ದು, ಅವರ ಸಹಕಾರದೊಂದಿಗೆ ಹಲವೆಡೆ ಗಿಡನಾಟಿ ಆರಂಭಿಸಿದೆ. ಇದರ ಅಂಗವಾಗಿ ಈ ಭಾನುವಾರ ಪ್ರಾರ್ಥನಾ ಪಿಯು ಕಾಲೇಜು ವಿದ್ಯಾರ್ಥಿಗಳೊಂದಿಗೆ ಸೇರಿ ನವನಗರ ಗಾರ್ಡನ್ನಲ್ಲಿ ಗಿಡ ನೆಡಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಹಲವು ಜನರು ಬೆನ್ನೆಲೆಯಾದರು. ನಗರಸಭೆ ಸದಸ್ಯ ಹಾಲೇಶ ಬಳ್ಳಾರಿ ಅವರು ನಗರಸಭೆಯ ಜೆಸಿಬಿ ಮೂಲಕ ಗಿಡಗಳಿಗಾಗಿ ಗುಂಡಿ ತೋಡಿಸಿ, ಟ್ಯಾಂಕರ ಮೂಲಕ ನೀರಿನ ವ್ಯವಸ್ಥೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ವ್ಯಾಪಾರಸ್ಥ ಹೇಮಾದ್ರಿಯವರು ಭಾಗವಹಿಸಿದ ಎಲ್ಲರಿಗಾಗಿ ಉಪಹಾರ ವ್ಯವಸ್ಥೆ ಮಾಡಿದರು. ಕಾರ್ಯಕ್ರಮದಲ್ಲಿ ಪರಿಸರ ಬಳಗ ಹಾಗೂ ಕಾಲೇಜು ವತಿಯಿಂದ ಹಲವರು ಉಪಸ್ಥಿತರಿದ್ದರು. ಪ್ರಾರ್ಥನಾ ಕಾಲೇಜು ಅಧ್ಯಕ್ಷ ಪ್ರೊ. ಎಸ್. ಬಿ. ಗೌಡರ, ಬದಾಮಿಯಿಂದ ಆಗಮಿಸಿದ್ದ ಪ್ರೊ. ಶಿವರಡ್ಡಿ ವಾಸನ್, ಆರ್‌ಎಫ್‌ಓ ಮಹೇಶ ಮರೆನ್ನವರು, ಯೂನಿಯನ್ ಬ್ಯಾಂಕ್ ಮ್ಯಾನೇಜರ್ ರಮೇಶ ಲಮಾಣಿ, ಗಣಪತಿ ನಾಗಭೂಷಣ, ವಿನಾಯಕ ಪಿ., ಪ್ರೊ. ಜಡಿಮಠ, ಮಲ್ಲಣ್ಣ ಗಂಗಲ್, ಬಸವರಾಜ ಬಾದೋಡಗಿ, ರಂಗನಗೌಡ ದಂಡಣ್ಣವರ, ವಿರುಪಾಕ್ಷಯ್ಯ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರವೂ ಸ್ಫೂರ್ತಿದಾಯಕವಾಗಿತ್ತು. ಮಲ್ಲಿಕಾರ್ಜುನ ಕುಂಬಾರ, ಪ್ರಜ್ವಲ್ ರೋಣದ, ಬಸವರಾಜ ಹಿರೇಮಠ, ಸುನೀಲ ಕಂಬಾಳಿ, ಶ್ರೀನಿವಾಸ್ ಭವಾನಿ, ಬಸವರಾಜ ತೋಟಗೇರ, ಓಂಕಾರ್ ಸವಳೆ, ನಾಗರಾಜ ಕುಂಬಾರ, ಯಮನಪ್ಪ ಭಾಂಗಿ, ಶಿವಪ್ರಸಾದ ಮುಂತಾದ ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಈ ಸಂದರ್ಭ ಕಾಲೇಜಿನ ಫಿಜಿಕಲ್ ಡೈರೆಕ್ಟರ್ ದೇವರಾಜ ಲಮಾಣಿ ಅವರು ವಿದ್ಯಾರ್ಥಿಗಳನ್ನು ಮಾರ್ಗದರ್ಶನ ನೀಡಿದರು.

# ಅತೀ ಶೀಘ್ರ ಗ್ರಾಮಗಳ ನದಿ ದಡದ ಗ್ರಾಮಗಳ ಸ್ಥಳಾಂತರ

**ಕಾಗವಾಡ:** ತಾಲ್ಲೂಕಿನ ಕೃಷ್ಣಾ ನದಿಯ ನೀರಿನಿಂದ ಬಾಧಿತವಾಗುವ ಜೂಗುಳ, ಮಂಗಾವತಿ, ಶಹಾಪೂರ, ಗ್ರಾಮಗಳ ಶಾಶ್ವತವಾಗಿ ಸ್ಥಳಾಂತರವನ್ನು ಆದಷ್ಟು ಬೇಗ ಕೈಗೊಳ್ಳಲಾಗುವುದು ಎಂದು ಶಾಸಕ ರಾಜು ಕಾಗೆ ಹೇಳಿದರು. ಅವರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸಮುದಾಯ ಭವನ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಸಲ್ಲಿಸಿ ಮಂಗಾವತಿ ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿ ಪ್ರತಿ ವರ್ಷ ಮಳೆಗಾಲದಲ್ಲಿ ಈ ಮೂರು ಗ್ರಾಮಗಳಲ್ಲಿ ಕೃಷ್ಣಾ ನದಿಯ ನೀರು ತಿಂಗಳು ಗಟ್ಟಲೆ ನೀರು ನಿಲ್ಲವುದರಿಂದ ಜನರು ಬೇರೆ ಬೇರೆ ಗ್ರಾಮಗಳ ತಮ್ಮ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಹಾಗೂ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆಯುತ್ತಾರೆ ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿಕೆಶಿವಕುಮಾರ ಅವರೊಂದಿಗೆ ಚರ್ಚಿಸಲಾಗಿದ್ದು ಬರುವ ಕೆಲವೇ ತಿಂಗಳಲ್ಲಿ ಸ್ಥಳಾಂತರ ಕಾರ್ಯ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದರು, ಮತ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ 72 ಸಮುದಾಯ ಭವನ ನಿರ್ಮಾಣ ಕಾರ್ಯ ಪ್ರಗತಿಯಲ್ಲಿ ಇದ್ದು ಮುಂದಿನ ಕೆಲವೇ ದಿನಗಳಲ್ಲಿ ಪೂರ್ಣಗೊಳಲಿವೆ, ಅದರಂತೆ 13 ಕೋಟಿ ವೆಚ್ಚದಲ್ಲಿ ಜನರ ಬೇಡಿಕೆಗೆ ಅನುಗುಣವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು ಅವುಗಳು ಸಹ ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲ್ಲಿವೆ ನನ್ನ ಮನವಿಗೆ ಮುಖ್ಯಮಂತ್ರಿಗಳು ಸಹ ಸಾಕಷ್ಟು ವಿಶೇಷ ಅನುದಾನ ನೀಡಿದ್ದಾರೆ ಇನ್ನು ಹೆಚ್ಚಿನ ಅನುದಾನ ತಂದು ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ರಸ್ತೆಗೆ ಹೆಚ್ಚಿನ ಒತ್ತು ನೀಡಿ ಹಂತ ಹಂತವಾಗಿ ಕ್ಷೇತ್ರವನ್ನು ಅಭಿವೃದ್ಧಿಪಿಸಲಾಗುವುದು ಎಂದು ಹೇಳಿದರು. ಈ ವೇಳೆ ಜಿ.ಪಂ ಅಧಿಕಾರಿ ವೀರಣ್ಣಾ ವಾಲಿ, ಮಡಿವಾಳಪ್ಪ ಪಾಟೀಲ, ಧುರೀಣರಾದ ಅನೀಲ ಸಿಂಧೆ, ಸುನೀಲ ಅವಟಿ, ಹರ್ಷ ಮಗದುಮ್ಮ, ಸುನೀಲ ತೇಲಿ, ಸುನೀಲ ಪಾಟೀಲ, ಶ್ರೀಮಂತ ಸಲಗರೆ, ಅನೀಲ ಸತ್ತಿ ಬಾಲಾಜಿ ಪಾಟೀಲ, ಈಶ್ವರ ಕೋಳಿ, ವಸಂತ ಗಾಡಿವಡ್ಡರ, ಅಣ್ಣಾಸಾಹೇಬ ಪಾಟೀಲ, ರವೀಂದ್ರ ಪೂಜಾರಿ, ಉಮೇಶ ಪಾಟೀಲ, ಅವಿನಾಶ ಪಾಟೀಲ, ವಸಂತ ಖೋತ, ರಾಹುಲ ಶಹಾ ಸೇರಿದಂತೆಲ ಅನೇಕರು ಇದ್ದರು.

# ಪ್ರಾಚಾರ್ಯೆ ಸುನಂದಾ ಶಿರೂರರಿಗೆ ಕರ್ನಾಟಕ ಭೂಷಣ ಪ್ರಶಸ್ತಿ



**ಬೆಂಗಳೂರು :** ವಂದೇ ಮಾತರಂ ಲಲಿತ ಕಲಾ ಅಕಾಡೆಮಿ (ರಿ.) ಬೆಂಗಳೂರು ಇವರು ಆಯೋಜಿಸಿದ್ದ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವು ಜುಲೈ 14 ರಂದು ಇಲ್ಲಿಯ ರವೀಂದ್ರ ಕಲಾಕ್ಷೇತ್ರದಲ್ಲಿ ಜರುಗಿತು. ಈ ಸಮಾರಂಭದಲ್ಲಿ ಜಮಖಂಡಿಯ ಸರಕಾರಿ ಪ್ರಥ'ಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರಿಗೆ, ಅವರ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಪರಿಗಣಿಸಿ "ಕರ್ನಾಟಕ ಭೂಷಣ 2025" ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸುಕ್ಷೇತ್ರ ಘಡಿವಡಿಕೆಯ ಪರಮಪೂಜ್ಯ ಶ್ರೀ ವಡಿಕೆಪ್ಪಯ್ಯ ತಾತನವರು ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಈ ಸಮಾರಂಭದಲ್ಲಿ ಗೌರವಾನ್ವಿತ ನಿವೃತ್ತ ನ್ಯಾಯಾಧೀಶ ಶ್ರೀ ಸಂತೋಷ ಹೆಗಡೆಯವರು, ಡಾ. ಶ್ರೀಧರ, ಖ್ಯಾತ ಚಲನಚಿತ್ರ ಕಲಾವಿದರು, ಚಂದನವನದ ತಾರೆ ಶೃತಿ ಹರಿಹರನ್ ಹಾಗೂ ಗೌರವಾನ್ವಿತ ಸನ್ಮಾನ್ಯ ಶ್ರೀ ಎಸ್. ಕೆ. ಅನಂತ, ದಕ್ಷಿಣ ಭಾರತ ಚಲನ ಚಿತ್ರೋತ್ಸವದ ಸಮನ್ವಯಕಾರರು ಇವರ ಘನ ಉಪಸ್ಥಿತಿಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಡಾ. ಅನು (ಅಮ್ಮ), ದೇವಿ ಉಪಾಸಕರು, ಆದಿಪರಾಶಕ್ತಿ ರೇಣುಕ ಯಲ್ಲಮ್ಮ ದೇವಸ್ಥಾನ, ದೊಡ್ಡಬೆಳವಂಗಲ, ಶ್ರೀಮತಿ ಮಹಾಲಕ್ಷ್ಮಿ ಸಮಾಜ ಸೇವಕರು ಮತ್ತು ಸಂಸ್ಥಾಪಕ ಅಧ್ಯಕ್ಷರು, ಅಹಲ್ಯಾ ಫೌಂಡೇಶನ್ ಬೆಂಗಳೂರು, ಶ್ರೀ ಡಾ. ಸಿ. ಎಂ. ರಾಜಶೇಖರ, ಕೆ. ಆರ್. ಸೇವಾ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕರು ಮತ್ತು ರಾಜ್ಯಾಧ್ಯಕ್ಷರು, ಶ್ರೀ ಪಿ. ಶ್ರೀಧರ, ಕನ್ನಡಪರ ಹೋರಾಟಗಾರರು, ಸನ್ಮಾನ್ಯ ಎನ್. ಎಸ್. ಪಾಟೀಲ ಪ್ರಭಾರ ಅಧ್ಯಕ್ಷರು, ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳು, ಡಾ. ಸೋಮಶೇಖರನ್, ಕಲಾವಿದರು ಮತ್ತು ಚಲನಚಿತ್ರ ನಿರ್ಮಾಪಕರು, ಸನ್ಮಾನ್ಯಶ್ರೀ ಪ್ರಶಾಂತ್ ಕಲ್ಲೂರ, ರಾಜ್ಯಾಧ್ಯಕ್ಷರು ವೀರಶೈವ ಲಿಂಗಾಯತ ಮಹಾವೇದಿಕೆ, ಶ್ರೀ ಕೆ. ಎಂ. ಘನಮಠೇಶ ಅಧ್ಯಕ್ಷರು, ವಂದೇ ಮಾತರಂ, ಲಲಿತ ಕಲಾ ಅಕಾಡೆಮಿ (ರಿ.) ಬೆಂಗಳೂರು ಇವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕಾಲೇಜಿನ ಎಲ್ಲ ಸಿಬ್ಬಂದಿಯವರು ಡಾ. ಸುನಂದಾ ಎಸ್. ಶಿರೂರ ಇವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

# ಲೋಕಾಪೂರ ಪ್ಯಾಸೆಂಜರ್ ರೈಲು ಪ್ರಾರಂಭಿಸಿ ಡಾ: ಶ್ರೀ ಪ್ರಭುಸ್ವಾಮೀಜಿ



**ಬಾಗಲಕೋಟೆ :** ಇಂದು ಚರಂತಿಮಠದಲ್ಲಿ ಪೂಜ್ಯಶ್ರೀಗಳು ಲೋಕಸಭಾ ಸದಸ್ಯರಾದ ಪಿ ಸಿ ಗದ್ದಿಗೌಡರ ಅವರನ್ನು ಕುಡಚಿ ರೇಲ್ವೇ ಮಾರ್ಗದ ಲೋಕಾಪೂರದ ವರೆಗೆ ಕಾಮಗಾರಿ ಪೂರ್ಣಗೊಂಡಿದ್ದು, ಸಾರ್ವಜನಿಕರಿಗೆ ರೈಲು ಪ್ರಾರಂಭಿಸಲು ಪ್ರಯತ್ನ ಮಾಡಿ ಎಂದು ಸಂಸದರಾದ ಪಿ ಸಿ ಗದ್ದಿಗೌಡರನ್ನು ತಿಳಿಸಿದರು. ಬರಿ ಹೋರಾಟ ಮಾಡದರೇ ಸಾಲದು ತಾವು ಅಧಿಕಾರದಲ್ಲಿ ಇದ್ದೀರಿ ರೇಲ್ವೆ ಇಲಾಖೆಯ ಮೇಲೆ ಒತ್ತಡ ತಂದು ಪ್ಯಾಸೆಂಜರ್ ರೈಲು ಪ್ರಾಂಭಿಸಲು ಪ್ರಯತ್ನಿಸಬೇಕು ಅಂತಾ ತಿಳಿಸಿಸದರು.

ಇದೇ ಸಂದರ್ಭದಲ್ಲಿ ರೇಲ್ವೇ ಹೋರಾಟಗಾರರಾದ ಕುತುಬುದ್ದೀನ ಖಾಜಿ ಸಂಸದರನ್ನು ಉದ್ದೇಶಿಸಿ ಮಾತನಾಡಿ ಬಾಗಲಕೋಟದಿಂದ ಲೋಕಾಪೂರವರಗೆ ಆರು ನಿಲ್ದಾಣಗಳು ಒಳಪಟ್ಟಿದ್ದು, ಕೋಟ್ಯಾಂತರ ರೂಪಾಯಿಗಳು ಸರಕಾರ ಖರ್ಚುಮಾಡಿದೆ. ರೈಲು ಪ್ರಾರಂಭ ಇಲ್ಲದಿರುವುದರಿಂದ ಎಲ್ಲಾ ಕಟ್ಟಡಗಳು ಹಾಳಾಗಿ ಹೋಗುತ್ತಿದ್ದು, ರೈಲು ಸೇವೆ ಪ್ರಾರಂಭ ಇದ್ದರೆ ಅವು ಸಂರಕ್ಷಣೆ ಆಗುತ್ತವೆ. 2017 ರಲ್ಲಿ ಖಜ್ಜಡೋಣಿ ವರೆಗೆ ಕಾಮಗಾರಿ ಮುಗಿದು ರೈಲು ಪ್ರಾರಂಭ ಆಗದಿರುವುದರಿಂದ ಎಲ್ಲಾ ಕಟ್ಟಡಗಳು ಹಾಳಾಗಿ ಪುನರ್ ನಿರ್ಮಾಣ ಗೊಂಡಿವೆ. ಈಗ ಲೋಕಾಪೂರ ರೈಲು ನಿಲ್ದಾಣ ಪೂರ್ಣಗೊಂಡು ಸೇವೆಗೆ ಸಜ್ಜಾಗಿ ನಿಂತಿದೆ. ತಾರತಮ್ಯ ಮಾಡದೇ ಅತೀ ಶೀಘ್ರದಲ್ಲಿ ರೈಲು ಸೇವೆ ಪ್ರಾಂಭಿಸಲು ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸಿದರು.

ಲೋಕಾಪೂರ ಯಾದವಾಡ ಮುಧೋಳ ಜಮಖಂಡಿ ಭಾಗದಲ್ಲಿ ರೇಲ್ವೇ ಕಾಮಗಾರಿ ನಿದಾನಗತಿಯಲ್ಲಿ ಸಾಗಿದ್ದು ವೇಗದ ಗತಿಯಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಿ ಎಂದು ಹೇಳಿ ರಬಕವಿ ಬನಹಟ್ಟಿ ತೇರದಾಳ ಕುಡಚಿ ವರೆಗೆ ಯೋಜನೆಗೆ ಒಳಪಡುವ ಭೂಮಿ ಸ್ವಚ್ಚಮಾಡಲು ಆರು ಕೋಟಿ ವ್ಯಚ್ಚದಲ್ಲಿ ರೇಲ್ವೇ ಇಲಾಖೆ ಟೆಂಡರ್ ತೆರೆದಿದ್ದು ಇದೆ. ಅದರ ಮಾಹಿತಿ ಪಡೆದು ಶೀಘ್ರದಲ್ಲಿ ಕುಡಚಿ ವರೆಗೂ ಪೂರ್ಣ ಪ್ರಮಾಣದ ಕಾಮಗಾರಿ ಪ್ರಾರಂಭಿಸಲು ರೇಲ್ವೇ ಇಲಾಖೆಗೆ ಸೂಚಿಸಬೇಕು ಎಂದು ಕುತುಬುದ್ದೀನ ಖಾಜಿ ಸಂಸದರನ್ನು ಒತ್ತಾಯಿಸಿದರು.

ಅದಕ್ಕೆ ಸ್ಪಂದಿಸಿದ ಸಂಸದರು ಈಗಾಗಲೇ ಲೋಕಾಪೂರದ ವರೆಗೆ ಪ್ರಯಾಣಿಕರ ರೈಲು ಪ್ರಾರಂಭಿಸಲು ರೈಲ್ವೇ ಅಧಿಕಾರಿಗಳಿಗೆ ಸೂಚಿಸಲಾಗಿದೆ. ರೈಲ್ವೇ ಸಚಿವ ಶ್ರೀ ವಿ ಸೋಮಣ್ಣ ರವರು ಉದ್ಘಾಟನೆ ಸಮಯ ನಿಗದಿಪಡಿಸಿಲ್ಲ. ಅತೀ ಶೀಘ್ರದಲ್ಲಿ ದಿನಾಂಕ ಪ್ರಕಟಿಸುವ ಭರವಸೆ ಇದೆ ಎಂದರು. ಕುಡಚಿವರೆಗೆ ಪೂರ್ಣ ಕಾಮಗಾರಿ ಪ್ರಾರಂಭಕ್ಕೆ ಪ್ರಯತ್ನ ಮಾಡುತ್ತೇನೆ ನಡೆದಂತಹ ಕಾಮಗಾರಿಗೆ ವೇಗ ಗತಿಯಲ್ಲಿ ಪ್ರಾರಂಭಿಸಲು ಪತ್ರ ಬರೆದು ರೇಲ್ವೇ ಇಲಾಖೆಗೆ ತಿಳಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಪಿ ಎಚ್ ಪೂಜಾರ್ ರಾಜ್ಯ ಸಭಾ ಸದಸ್ಯರಾದ ನಾರಯಣಸಾ ಬಾಂಡಗೆ ಬಸವೇಶ್ವರ ಬ್ಯಾಂಕಿನ ಅಧ್ಯಕ್ಷರಾದ ಪ್ರಕಾಶ ತಪಶೆಟ್ಟಿ ಮಲ್ಲನ್ನ ನಾಡಗೌಡರು ರವಿ ಪಟ್ಟಣದ ಶ್ರೀನಿವಾಸ ಬಳ್ಳಾರಿ ಮೊನುದ್ದೀನ ಖಾಜಿ ಅನೇಕ ಗಣ್ಯ ಮಾನ್ಯರು ಉಪಸ್ಥಿತರಿದ್ದರು.

# ಸರ್ವರೂ ಆರೋಗ್ಯವಂತರಾಗಿ ಬಾಳಬೇಕು: ಡಾ. ಆರ್.ಟಿ. ದೇಶಪಾಂಡೆ

**ಕಮತಗಿ :** ಸರ್ವರೂ ಆರೋಗ್ಯವಂತರಾಗಿ ಬಾಳಬೇಕಾದರೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಉತ್ತಮ ಆಹಾರ ಸೇವನೆಯಿಂದಲೇ ಆರೋಗ್ಯವಂತ ಜೀವನ ಸಾಧ್ಯ, ಎಂದು ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷರಾದ ಡಾ. ಆರ್.ಟಿ. ದೇಶಪಾಂಡೆ ಅಭಿಪ್ರಾಯಪಟ್ಟರು. ಅವರು ಹೆಜ್ಜೆ ಸಂಸ್ಥೆ, ಕೆರೂಡಿ ಆಸ್ಪತ್ರೆ ಹಾಗೂ ಕೆರೂಡಿ ಬ್ಲಡ್ ಸೆಂಟರ್ ಸಹಯೋಗದಲ್ಲಿ ಕಮತಗಿಯಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಈ ಶಿಬಿರದಲ್ಲಿ ಬಾಗಲಕೋಟೆಯ ಹೃದಯ ತಜ್ಞ ಡಾ. ಸಾಗರ ಪಾಟೀಲ, ಎಲವು-ಕೀಲು ತಜ್ಞ ಡಾ. ಚಂದ್ರಶೇಖರ್ ಚನ್ನಪ್ಪನವರ ಮತ್ತು ಕಿಡ್ನಿ ತಜ್ಞ ಡಾ. ಕಿರಣ್ ಬಿಜಾಪುರ ಅವರು ಆರೋಗ್ಯ ತಪಾಸಣೆಯಲ್ಲಿ ಪಾಲ್ಗೊಂಡು ಸಾರ್ವಜನಿಕರಿಗೆ ಸೇವೆ ಸಲ್ಲಿಸಿದರು. ಕೆರೂಡಿ ಬ್ಲಡ್ ಸೆಂಟರ್ ವತಿಯಿಂದ ಜರುಗಿದ ಬೃಹತ್ ರಕ್ತದಾನ ಶಿಬಿರದಲ್ಲಿ ಸುಮಾರು 38ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿ ಸಮಾಜಪಾಲನೆಯ ಉದ್ದೇಶಕ್ಕೆ ಕೈಜೋಡಿಸಿದರು.

ಕಾರ್ಯಕ್ರಮದಲ್ಲಿ ಹಟಗಾರ ಸಮಾಜದ ಅಧ್ಯಕ್ಷ ಮಹಾದೇವಪ್ಪ ಚೌಡಾಪೂರ, ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹರ್ಷಕುಮಾರ್ ದೇಸಾಯಿ,

ಬಸವರಾಜ ನಿಡುಗುಂದಿ, ಶೇಖರಪ್ಪ ತತ್ರಾಣಿ, ವೀರಭದ್ರಪ್ಪ ಮುರಾಳ, ಜಂಪಣ್ಣ ಶಿರಗುಂಪಿ, ನಾಗಪ್ಪ ಅಚನೂರ, ಕಾಶಿನಾಥ ತಂಬೂರಿ, ರಮೇಶ್ ಕುಮಚಗಿ, ಸುನಿಲ್ ಕುಮಚಗಿ, ರಾಜಶೇಖರ ಕೋಲಾರ ಮೊದಲಾದವರು ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಎಂ. ರಮೇಶ್ ಕಮತಗಿ ನಿರೂಪಿಸಿದರು. ಶಂಕರ ವನಕಿ ಕಾರ್ಯಕ್ರಮದ ಪ್ರಸ್ತಾವಿಕ ನುಡಿದರು.

# ಬೆಳಗಾವಿ | 'ಶಕ್ತಿ'ಗೆ ಶಕ್ತಿ ತುಂಬಿದ ಮಹಿಳೆಯರು: ಬಸ್‌ಗೆ ಪೂಜೆ, ಸಂಭ್ರಮಾಚರಣೆ



**ಬೆಳಗಾವಿ :** ರಾಜ್ಯದಲ್ಲಿ 'ಶಕ್ತಿ' ಯೋಜನೆಯಡಿ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರು 500 ಕೋಟಿ ಸಲ ಸಂಚರಿಸಿದ ಹಿನ್ನೆಲೆಯಲ್ಲಿ ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಸೋಮವಾರ ಸಂಭ್ರಮಾಚರಣೆ ಮಾಡಲಾಯಿತು.

ವಿವಿಧೆಡೆಯಿಂದ ಬೆಳಗಾವಿ ನಿಲ್ದಾಣಕ್ಕೆ ಬಂದಿಳಿದ ಮತ್ತು ಇಲ್ಲಿಂದ ವಿವಿಧೆಡೆ ತೆರಳುತ್ತಿದ್ದ ಮಹಿಳಾ ಪ್ರಯಾಣಿಕರಿಗೆ ಸಿಹಿ ಹಂಚಲಾಯಿತು. ಬೆಳಗಾವಿ-ಧಾರವಾಡ ಮಾರ್ಗದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಬಸ್‌ಗೆ ಪೂಜೆ ಸಲ್ಲಿಸಲಾಯಿತು.

ಶಾಸಕ ಆಸಿಫ್ ಸೇಠ್, 'ಶಕ್ತಿ ಯೋಜನೆಗೆ ರಾಜ್ಯದಲ್ಲಿ ಉತ್ತಮ ಸ್ಪಂದನೆ ಸಿಕ್ಕಿದೆ. ನಿತ್ಯ ದುಡಿಮೆಗೆ ಹೋಗುವವರು, ಶಾಲಾಕಾಲೇಜಿಗೆ ಹೋಗುವವರು, ವೈದ್ಯಕೀಯ ಸೇವೆ ಪಡೆಯಲು ಹೋಗುವ ಮಹಿಳೆಯರು ಇದರ ಲಾಭ ಪಡೆಯುತ್ತಿದ್ದಾರೆ. ಮುಂದಿನ ಎರಡೂವರೆ ವರ್ಷವೂ ಈ ಯೋಜನೆ ಮುಂದುವರಿಯಲಿದೆ' ಎಂದರು.

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಿವೆ. ಶಕ್ತಿ ಯೋಜನೆಯಡಿ ಮಹಿಳೆಯರು ಪ್ರಯಾಣಿಸಿದ 12,669 ಕೋಟಿ ಶುಲ್ಕವನ್ನು ಸರ್ಕಾರವು ಸಾರಿಗೆ ಸಂಸ್ಥೆಗೆ ಪಾವತಿಸಿದೆ' ಎಂದು ಹೇಳಿದರು.

# ರಾಮದುರ್ಗ: ಯುವ ಕಾಂಗ್ರೆಸ್ ಕಾರ್ಯಕಾರಣಿ ಸಭೆ



**ರಾಮದುರ್ಗ :** ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಜರುಗುವ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಗೆಲ್ಲಲು ಪ್ರತಿ ಬೂತ್‌ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವಲ್ಲಿ ಯುವಕರು ಪ್ರಮುಖ ಪಾತ್ರವಹಿಸಬೇಕಿದೆ. ಇದಕ್ಕಾಗಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಹೆಚ್ಚಿನ ಶ್ರಮ ವಹಿಸಬೇಕು ಎಂದು ವಿಧಾನ ಸಭೆಯ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಭಾನುವಾರ ಪಟ್ಟಣದ ಮರಾಠಾ ಕಲ್ಯಾಣ ಮಂಟಪದಲ್ಲಿ ಜರುಗಿದ ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ರಾಹುಲ್ ಜಾರಕಿಹೊಳಿ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಯುವಕರು ಸಂಘಟಿತರಾಗಿ ರಾಜ್ಯದ ಪ್ರತಿ ಗ್ರಾಮ ಮತ್ತು ಭೂತ ಮಟ್ಟದಲ್ಲಿ ಉತ್ತಮ ಕೆಲಸ ಮಾಡಿ ಯುವ ಕಾಂಗ್ರೆಸ್ ಪದಾಧಿಕಾರಿಗಳ ಉನ್ನತ ಸ್ಥಾನಕ್ಕೇರಬೇಕು ಎಂದು ತಿಳಿಸಿದರು.

ರಾಜ್ಯಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಹುಲ್ ಜಾರಕಿಹೊಳಿ ಮಾತನಾಡಿ, ದೇಶದಲ್ಲಿ ಕಾಂಗ್ರೆಸ್ ಪಕ್ಷ ಭದ್ರಬುನಾದಿ ಹಾಕಿರುವುದನ್ನು ಯುವಕರಿಗೆ ಮನವರಿಕೆ ಮಾಡಿಕೊಡುವುದರ ಜೊತೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಚುನಾವಣೆಯಲ್ಲಿ ಭರವಸೆ ನೀಡಿದ್ದ ಪಂಚ ಗ್ಯಾರಂಟಿ ಅನುಷ್ಠಾನದ ಜೊತೆಗೆ ಅಭಿವೃದ್ಧಿ ಕಾರ್ಯ ಮಾಡಿ ಜನರ ಮನ ಗೆದ್ದಿದೆ. ಸರ್ಕಾರದ ಸಾಧನೆಗಳನ್ನು ಪ್ರತಿ ಮನೆಮನೆಗೆ ತೆರಳಿ ತಿಳಿವಳಿಕೆ ನೀಡಬೇಕು ಎಂದರು.

ಪಕ್ಷದ ಸಂಘಟನೆ ಜೊತೆಗೆ ಸಮಾಜಮುಖಿ ಕಾರ್ಯ ಮಾಡಿ ಜನರ ವಿಶ್ವಾಸ ಗಳಿಸುವಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಗಮನ ಹರಿಸಬೇಕು. ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆ ಮಾಡುವ ಮುಖಾಂತರ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ತಿಳಿಸಿದರು.

ರಾಮದುರ್ಗ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಅನಿಕೇತ ಪಟ್ಟಣ ಮಾತನಾಡಿ, ದೇಶದಲ್ಲಿ ಯುವ ಜನಾಂಗ ಜಾತಿ,

ಧರ್ಮದ ಹೆಸರಲ್ಲಿ ಭವಿಷ್ಯ ಮರೆತು ಶಿಕ್ಷಣ ಮತ್ತು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ದೇಶದ ಭವಿಷ್ಯವಾಗಿರುವ ಯುವ ಜನಾಂಗಕ್ಕೆ ಶಿಕ್ಷಣ ಮತ್ತು ಉದ್ಯೋಗಕ್ಕೆ ಅಗತ್ಯವಿರುವ ಜಾಗೃತಿ ಮೂಡಿಸಿ ಸರಿದಾರಿಗೆ ತರಬೇಕಾದ ಅನಿವಾರ್ಯತೆ ಯುವ ಜನರ ಮೇಲಿದೆ. ಇದಕ್ಕೆಲ್ಲ ಹಿರಿಯರ ಮಾರ್ಗದರ್ಶನವೂ ಮುಖ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕಾರ್ತಿಕ ಪಾಟೀಲ, ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಜಿ. ಬಿ. ರಂಗನಗೌಡ್ರ, ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಪರಪ್ಪ ಜಂಗವಾಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮೀಣ ಅಧ್ಯಕ್ಷ ಚೇತನ ದೇಸಾಯಿ, ನಗರ ಅಧ್ಯಕ್ಷ ಇನಾಯತ ಕಲಾದಗಿ, ಕೆಪಿಸಿಸಿ ಸದಸ್ಯ ಸುರೇಶ ಪತ್ತೇಪೂರ, ಜಿಪಂ ಮಾಜಿ ಸದಸ್ಯ ಜಹೂರ ಹಾಜಿ, ಸೋಮಶೇಖರ ಶಿದ್ಲಿಂಗಪ್ಪನವರ, ಮಂಜುಳಾ ದೇವರಡ್ಡಿ ಸೇರಿದಂತೆ ಅನೇಕರು ಇದ್ದರು.

ಬಸವರಾಜ ಪ್ರಧಾನಿ ಸ್ವಾಗತಿಸಿದರು. ವಿಜಯಕುಮಾರ ರಾಠೋಡ ಪ್ರಾಸ್ತಾವಿಕ ಮಾತನಾಡಿದರು. ರಾಜಶೇಖರ ತೊರಗಲ್ ಕಾರ್ಯಕ್ರಮ ನಿರೂಪಿಸಿದರು. ರಮೇಶ ಬಂಡಿವಡ್ಡರ ವಂದಿಸಿದರು.

# ಬೆಳ್ಳಂಕಿ: ನಿರಂತರ ನೀರು ಸರಬರಾಜು ಪೂರೈಕೆ ಗ್ರಾಮ



**ಹುಕ್ಕೇರಿ :** ಜಿಲ್ಲಾ ಪಂಚಾಯಿತಿ ಬೆಳಗಾವಿಯ ಚಿಕ್ಕೋಡಿ ವಿಭಾಗದ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಹಾಗು ತಾಲ್ಲೂಕು ಪಂಚಾಯಿತಿ ಮತ್ತು ಕೋಟ ಗ್ರಾಮ ಪಂಚಾಯಿತಿಯ ಜಲ ಜೀವನ ಮಿಷನ್ ಯೋಜನೆಯಡಿ ಕರ್ನಾಟಕ ಸುಸ್ಥಿರ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ ಸಾಂಸ್ಥಿಕರಣದ ಬಲವರ್ಧನೆಯ ಅಂಗವಾಗಿ ಬೆಳ್ಳಂಕಿ ಗ್ರಾಮವನ್ನು ನಿರಂತರ ನೀರು ಸರಬರಾಜು ಪೂರೈಕೆ ಗ್ರಾಮ ಎಂದು ಘೋಷಣೆ ಮಾಡಲಾಗಿದೆ.


ಈ ಸಂದರ್ಭದಲ್ಲಿ ಇಇ ಪಾಂಡುರಂಗರಾವ್ ಅವರು ಮಾತನಾಡಿ, ನಿರಂತರ ನೀರು ಸರಬರಾಜು ಯೋಜನೆಯ ಲಾಭ ಪಡೆಯಲು ಮತ್ತು ಭವಿಷ್ಯದಲ್ಲೂ ನೀರಿನ ಮಹತ್ವ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು.

ಗ್ರಾಮದಲ್ಲಿ ಒಟ್ಟು 393 ಜನಸಂಖ್ಯೆಯಿದ್ದು 128 ಮನೆಗಳಿವೆ. 50,000 ಲೀಟರ್ ಮೇಲ್ಮಟ್ಟದ ಜಲ ಸಂಗ್ರಹಣಾ ಸಾಮರ್ಥ್ಯದ ಕಾಮಗಾರಿಗೆ ಒಟ್ಟು ಒಟ್ಟು 38 ಲಕ್ಷ ವೆಚ್ಚ ತಗುಲಿದೆ ಎಂದು ಮಾಹಿತಿ ನೀಡಿದರು.

ಕೋಟ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಧಾ ಪಾಟೀಲ, ಮಾಜಿ ಉಪಾಧ್ಯಕ್ಷ, ಹಾಲಿ ಸದಸ್ಯ ಸಚಿನ ಶಿಂಧೆ, ಸಚಿವ ಸತೀಶ್ ಜಾರಕಿಹೊಳಿ ಆಪ್ತ ಸಹಾಯಕ ದಯಾನಂದ ಪಾಟೀಲ್, ತಾಲ್ಲೂಕು ಪಂಚಾಯಿತಿ ಇಓ ಟಿ.ಆರ್.ಮಲ್ಲಾಡದ,

ಗ್ರಾಮೀಣ ಕುಡಿಯುವ ನೀರು ಸರಬುರಾಜು ಇಲಾಖೆ ಎಇಇ ವಿನಾಯಕ್ ಪೂಜಾರ್, ಸೆಕ್ಷನ್ ಆಫೀಸರ್ ಚೇತನ್ ಕಡಕೋಳ, ಅಭಿಷೇಕ್ ಪವಾರ್, ಸಂತೋಷ್ ಪಾಟೀಲ, ಜಿಲ್ಲಾ ಯೋಜನಾ ವ್ಯವಸ್ಥಾಪಕ ದೀಪಕ ಕಾಂಬಳೆ, ಡಿಟಿಎಸ್ ಮಲ್ಲಯ್ಯ ಮಠಪತಿ ಮತ್ತು ನವೀನ್, ಪಿಡಿಓ ಎಸ್.ಎಸ್. ಕಬ್ಬಗೋಳ, ನಾಗಯ್ಯ ಹಿರೇಮಠ, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು, ಗ್ರಾಮಸ್ಥರು ಇದ್ದರು

# ಬೆಳಗಾವಿ: ಮಟ್ಕಾ ಆಟದಲ್ಲಿ ತೊಡಗಿದ್ದ ನಾಲ್ವರ ಬಂಧನ



ಬೆಳಗಾವಿ: ನಗರದ ವಿವಿಧೆಡೆ ಶನಿವಾರ ಮಟ್ಕಾ ಆಟದಲ್ಲಿ ತೊಡಗಿದ್ದ ನಾಲ್ವರು ಆರೋಪಿಗಳನ್ನು ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಪೊಲೀಸರು ಬಂಧಿಸಿದ್ದಾರೆ.

ರಾಮತೀರ್ಥ ನಗರದ ಸಾರ್ವಜನಿಕ ಸ್ಥಳದಲ್ಲಿ ಅದೇ ಪ್ರದೇಶದ ನಾಗಯ್ಯ ಮಠಪತಿ(48) ಅವರನ್ನು ಮಾಳಮಾರುತಿ ಠಾಣೆ ಪೊಲೀಸರು ಬಂಧಿಸಿ, ?3 ಸಾವಿರ ನಗದು ವಶಕ್ಕೆ ಪಡೆದಿದ್ದಾರೆ.

ಗಣಪತ ಗಲ್ಲಿಯಲ್ಲಿ ಮಾಳಿ ಗಲ್ಲಿಯ ಪ್ರಶಾಂತ ಹಿರೇಮಠ(38) ಅವರನ್ನು ಖಡೇ ಬಜಾರ್ ಠಾಣೆ ಪೊಲೀಸರು ಬಂಧಿಸಿ, 1,820 ನಗದು ವಶಪಡಿಸಿಕೊಂಡಿದ್ದಾರೆ.

ಹಳೇ ಪಿ.ಬಿ ರಸ್ತೆಯಲ್ಲಿ ಶಹಾಪುರದ ಆನಂದವಾಡಿಯ ಫಿರೋಜ್ ಪಿತಲಿವಾಲಿ(45), ಬಂಜಾರ ಗಲ್ಲಿಯ ಐಮನ್ ಚಿಕ್ಕೋಡಿ(32) ಎಂಬುವರನ್ನು ಶಹಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅವರಿಂದ 4,100 ವಶಕ್ಕೆ ಪಡೆಯಲಾಗಿದೆ.

**ಗಾಂಜಾ ಸೇವನೆ: ಒಬ್ಬನ ಬಂಧನ**

ಬೆಳಗಾವಿ-ಸಾಂಬ್ರಾ ರಸ್ತೆಯಲ್ಲಿ ಅಮನ್ ನಗರ ಕ್ರಾಸ್ ಬಳಿ ಶನಿವಾರ ಗಾಂಜಾ ಸೇವಿಸುತ್ತಿದ್ದ ಹೊಸ ಗಾಂಧಿ ನಗರದ ಶಫಿಯುಲ್ಲಾ ಚೂರಿಖಾನ್(26) ಅವರನ್ನು ಮಾಳಮಾರುತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

# ಜಿಲ್ಲಾ ಮಟ್ಟದ ಕ್ರೀಡೆ: ಪ್ರಶಸ್ತಿ ಪ್ರಮಾಣ ಪತ್ರ ವಿತರಣೆ



**ವಿಜಯಪುರ:** ವಿಜಯಪುರ ಜಿಲ್ಲಾ ಪವರ ಲಿಫ್ಟ್ ಅಸೋಶಿಯೇಶನ್ ವತಿಯಿಂದ ದಿ.15ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ 14, 15 ವರ್ಷದ ಬಾಲಕ ಬಾಲಕಿಯರ ಜಿಲ್ಲಾ ಮಟ್ಟದ ಕ್ರೀಡೆ ಜರುಗಿತು.

ವಿಜಯಪುರ ಜಿಲ್ಲಾ ಪವರ್ ಲಿಫ್ಟ್ ಅಸೋಶಿಯೇಶನ್ ಅಧ್ಯಕ್ಷ ಕೃಷ್ಣಾ ಸೀನು ರಾಠೋಡ, ಕಾರ್ಯದರ್ಶಿ ಚಂದ್ರಕಾಂತ ತಾರನಾಳ ಹಾಗೂ ಕ್ರೀಡಾ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡ, ತರಬೇತಿದಾರ ಶಂಕರ ಸೊನ್ನಪ್ಪ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಭಾಗವಹಿಸಿದ ಕ್ರೀಡಾಪಟುಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ವಿತರಿಸಿ ಗೌರವಿಸಲಾಯಿತು.

# ವಿವಿಧೋದ್ದೇಶಗಳ ಗ್ರಾಮೀಣ ಕೃಷಿ ಸಂಘ: ಮೂವರು ಚುನಾವಣಾ ಕಣದಲ್ಲಿ




**ಸಂಬರಗಿ :** ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘಕ್ಕೆ ಜುಲೈ 20 ರಂದು ನಡೆಯಲಿರುವ ಚುನಾವಣೆಯಲ್ಲಿ ಒಟ್ಟುಐದುನಾಮಪತ್ರಗಳುಸಲ್ಲಿಕೆಯಾಗಿದ್ದು, ಅದರಲ್ಲಿ ಇಬ್ಬರು ನಾಮಪತ್ರ ಹಿಂಪಡೆದರು. ಆದ್ದರಿಂದ ಈಗ ಮೂವರು ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದು, ಚುನಾವಣೆ ತುಂಬಾ ತುರುಸಿನಿಂದ ನಡೆಯಲಿದೆ.

ಗಣೇಶ್ ಮಾಣಿಕ್ ಕದಮ್, ದಿನಕರ್ ಅಣ್ಣಪ್ಪಪವಾರ ಕಣದಲ್ಲಿದ್ದಾರೆ. ಈ ಚುನಾವಣೆಯಲ್ಲಿ 1111 ಮತಗಳಿವೆ. ಹಿಂದಿನ ಚುನಾವಣೆಯಲ್ಲಿ, ಕಾಂಗ್ರೆಸ್ ಬೆಂಬಲದಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಹೊಂದುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದಿದ್ದು, ಅದು ಹನ್ನೊಂದು ಸ್ಥಾನಗಳಲ್ಲಿ ಗೆದ್ದಿದ್ದರೂ, ಒಂದು ಸ್ಥಾನ ವಿರೋಧ ಪಕ್ಷಕ್ಕೆ ಹೋಯಿತು. ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ಆಯ್ಕೆ ಮಾಡಲಾಯಿತು. ಆದರೆ 11 ನಿರ್ದೇಶಕರಲ್ಲಿ ಒಬ್ಬರು ನಿಧನರಾದ ಕಾರಣ, ಆ ಸ್ಥಳದಲ್ಲಿ ಚುನಾವಣೆ ನಡೆಸಲಾಗಿದೆ. ಈ ಚುನಾವಣೆ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದ್ದು, ಪ್ರತಿ ಮತದಾರನನ್ನು ಭೇಟಿ ಆಗುತ್ತಿದ್ದಾರೆ. ಮತದಾರರು ಇಬ್ಬರು ಮುಖಂಡರಿಗೆ ಆಶ್ವಾಸನೆ ನೀಡುತ್ತಿದ್ದಾರೆ.

ವಿಲಾಸ್ ಟೋಣೆ ಹಾಗೂ ಅಣ್ಣಪ್ಪ ವೀಸಾಳ ಎರಡು ಗುಂಪಿನ ನಡುವೆ ಜಟಾಪಟಿ ನಡೆಯುತ್ತಿದೆ. ಪ್ರತಿಯೊಬ್ಬ ಸದಸ್ಯರ ವೈಯಕ್ತಿಕ ಸಭೆಗಳಿಗೆ ಹೆಚ್ಚಿನ ಒತ್ತು ನೀಡಿ ಭೇಟಿ ಆಗುತ್ತಿದ್ದಾರೆ. ಮತದಾರು ಸ್ತಬ್ಧವಾಗಿದ್ದು ಫಲಿತಾಂಶ ಘೋಷಣೆಯ ನಂತರವೇ ಮತದಾರನ ಒಲವು ಯಾರ ಪರ ಎಂಬುದು ಸ್ಪಷ್ಟವಾಗಲಿದೆ.

## ಮನಸೂರೆಗೊಂಡ 'ರಮಾಬಾಯಿ ಅಂಬೇಡ್ಕರ್'



**ಕೊಪ್ಪಳ :** 'ಬಿ.ಆರ್. ಅಂಬೇಡ್ಕರ್ ಅವರು ಉನ್ನತ ವ್ಯಾಸಂಗಕ್ಕೆ ಛತ್ರಪತಿ ಶಾಹು ಮಹಾರಾಜರಿಂದ ವಿದ್ಯಾರ್ಥಿ ವೇತನ ಪಡೆದು ಅಮೆರಿಕಕ್ಕೆ ಹೋಗುವ ಸಂದರ್ಭದಲ್ಲಿ ಅವರ ಪತ್ನಿ ರಮಾಬಾಯಿ ತುಂಬು ಗರ್ಭಿಣಿ. ಹೆರಿಗೆನಂತರದಕೆಲವೇದಿನಗಳಲ್ಲಿ ಆ ಮಗು ಮೃತಪಡುತ್ತದೆ. ಈ ವಿಷಯ ತಿಳಿಸಿದರೆ ಎಲ್ಲಿ ಗಂಡನ ಅಧ್ಯಯನಕ್ಕೆ ತೊಂದರೆಂಯಾಗುತ್ತದೆಂಯೊ ಎನ್ನುವ ಆತಂಕದಿಂದ ವಿಷಯ ತಿಳಿಸದೆ ಮಗುವಿನ ಅಂತ್ಯ ಸಂಸ್ಕಾರ ಮಾಡುತ್ತಾಳೆ'

ಇದು ಶನಿವಾರ ರಾತ್ರಿ ಸಾಹಿತ್ಯ ಭವನದಲ್ಲಿ ನಡೆದ 'ರಮಾಬಾಯಿ ಅಂಬೇಡ್ಕರ್ 'ನಾಟಕದಲ್ಲಿ ಕಂಡು ಬಂದ ದೃಶ್ಯ. ತಾಯಿಯ ಸಂಕಟ, ವೇದನೆ, ಆಕ್ರಂದನ ನಾಟಕ ನೋಡಲು ಸೇರಿದ್ದ ಜನರ ಕಣ್ಣುಗಳನ್ನೂ ತೇವ ಮಾಡಿದ್ದವು. ಕೊನೆಯ ತನಕವೂ ನಾಟಕ ಜನರ ಮೆಚ್ಚುಗೆ ಗಳಿಸಿತು.

ಚಾಲನೆ: ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿದ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮಾತನಾಡಿ 'ದೇಶದ ಆಡಳಿತದ ವ್ಯವಸ್ಥೆ ಯಾವ ದಿಕ್ಕಿನಲ್ಲಿ ಇರಬೇಕು, ಬಹುತ್ವ ಭಾರತದಲ್ಲಿ ಎಲ್ಲಾ ವರ್ಗದ ಜನರಿಗೆ ನ್ಯಾಯ ಸಿಗಬೇಕು ಎಂದು ಯೋಚಿಸಿ ಅಂಬೇಡ್ಕರ್ ಅವರು ಶ್ರೇಷ್ಠವಾದ ಸಂವಿಧಾನ ಕೊಟ್ಟಿದ್ದಾರೆ. ಅವರು ಕೊಟ್ಟ ಸಂವಿಧಾನದಿಂದಲೇ ಇಂಥ ಈ ಗೌರವ, ಸ್ಥಾನಮಾನ ಸಿಕ್ಕಿದೆ' ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ತಾಲ್ಲೂಕಿನ ದದೇಗಲ್‌ನ ಸಿದ್ಧರೂಢ ಮಠದ ಆತ್ಮಾನಂದ ಭಾರತಿ ಸ್ವಾಮೀಜಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಜುನಾಥ್ ಮ್ಯಾಗಳಮನಿ, ಹನುಮಂತಪ್ಪ ಚಲವಾದಿ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ತಗಡಿನಮನಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೋಳಿಬಸಯ್ಯ, ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಪ್ಪ ಜೋಗಿ, ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ರಾಮಣ್ಣ ಕಲ್ಲಣ್ಣವರ, ನಾಟಕ ಅಕಾಡೆಮಿ ಸದಸ್ಯ ಚಾಂದ್‌ಪಾಷಾ ಕಿಲ್ಲೇದಾರ, ಗುರುರಾಜ್ ಕುಲಕರ್ಣಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## MGNREGA। ಸಂಕಷ್ಟಕ್ಕೆ ಸಿಲುಕಿದ 5,400 ಸಿಬ್ಬಂದಿ

**ಕೊಪ್ಪಳ :** ರಾಜ್ಯದಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯಡಿ ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಸಿಬ್ಬಂದಿಗೆ ಏಳು ತಿಂಗಳಿಂದ ವೇತನ ಪಾವತಿಯಾಗಿಲ್ಲ. ಅಂದಾಜು 5,400 ಸಿಬ್ಬಂದಿ ಸಂಕಷ್ಟದಲ್ಲಿದ್ದಾರೆ.

ಜಿಲ್ಲಾ ಐಇಸಿ ಸಂಯೋಜಕ, ಜಿಲ್ಲಾ ಲೆಕ್ಕ ವ್ಯವಸ್ಥಾಪಕರು, ತಾಲ್ಲೂಕು ಆಡಳಿತ ಸಹಾಯಕರು, ತಾಲ್ಲೂಕು ಐಇಸಿ ಸಂಯೋಜಕ,

ಸಹಾಯಕ ಕಾರ್ಯಕ್ರಮ ಸಂಯೋಜಕರು, ಗ್ರಾಮ ಕಾಯಕ ಮಿತ್ರರು, ತಾಂಡಾ ರೋಜಗಾರ್ ಮಿತ್ರ, ತಾಂತ್ರಿಕ ಸಂಯೋಜಕರು ಹೀಗೆ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಹುದ್ದೆಗಳಲ್ಲಿ ಇರುವವರು ಬಹುತೇಕರು ಬಡ ಮತ್ತು ಮಧ್ಯಮ ವರ್ಗದವರು.



**ಕಾರಣವೇನು:** ಕೇಂದ್ರ ಸರ್ಕಾರ ಕಳೆದ ವರ್ಷ ತನ್ನ ಯೋಜನೆಗಳ ಲೆಕ್ಕಪತ್ರಗಳ ನಿರ್ವಹಣೆಯನ್ನು ಎಸ್‌ಎನ್‌ಎ ಸ್ಪರ್ಶ್ ತಂತ್ರಾಂಶದ ಮೂಲಕ ಆರಂಭಿಸಿದೆ.

ರಾಜ್ಯ ಸರ್ಕಾರ ನರೇಗಾ ಮತ್ತು ಖಜಾನೆ2 ಜೊತೆ ಸೇರಿಸಿ ರೀಟ್ ಎನ್ನುವ ತಂತ್ರಾಂಶ ಅಭಿವೃದ್ಧಿ ಪಡಿಸಿತ್ತು. ಕೇಂದ್ರದ ಸೂಚನೆ ಮೇರೆಗೆ ರಾಜ್ಯವೂ ಸ್ಪರ್ಶ್ ತಂತ್ರಾಂಶ ಅಳವಡಿಸಿಕೊಂಡಿದ್ದು ಇದು ಖಜಾನೆ2 ಜೊತೆ ಸುಗಮವಾಗಿ ಕೆಲಸ ಮಾಡುವ ವಿಷಯ ಖಚಿತಪಡಿಸಿಕೊಳ್ಳದೆ ರೀಟ್ ತಂತ್ರಾಂಶವನ್ನು ನಿಷ್ಕ್ರಿಯ ಮಾಡಿದ್ದರಿಂದ ಹಣವಿದ್ದರೂ ವೇತನ ಪಾವತಿ ವಿಳಂಬವಾಗುತ್ತಿದೆ ಎಂದು ಇಲ್ಲಿನ ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳು ಹೇಳುತ್ತಾರೆ.

ಬಹಳಷ್ಟು ಸಿಬ್ಬಂದಿಗೆ ಮೇ,

ಜೂನ್‌ನಲ್ಲಿ ಮಕ್ಕಳ ಶಿಕ್ಷಣದ ಶುಲ್ಕ ಪಾವತಿಸಲಾಗಿಲ್ಲ. ಅವಲಂಬಿತರ ಆರೋಗ್ಯ ಸಂಬಂಧಿ ಖರ್ಚುಗಳ ನಿರ್ವಹಣೆ ಮಾಡಲು ಹಣವಿಲ್ಲದಂತಾಗಿದೆ.

ಬಾಕಿ ವೇತನಕ್ಕಾಗಿ ಅನೇಕ ಕಡೆ ಸಿಬ್ಬಂದಿ ಪ್ರತಿಭಟನೆಯನ್ನು ನಡೆಸಿದ್ದಾರೆ.

ಸದ್ಯ, ಕಚೇರಿಯಲ್ಲಿದ್ದುಕೊಂಡೇ ಕರ್ತವ್ಯಕ್ಕೆ 'ಅಸಹಕಾರ' ಹೋರಾಟ ನಡೆಸುತ್ತಿದ್ದಾರೆ.

'ಮಾಸಿಕ ವೇತನವನ್ನೇ ಈ ಸಿಬ್ಬಂದಿ ಆಧರಿಸಿದ್ದಾರೆ. ಮಕ್ಕಳಿಗೆ ಅಗತ್ಯ ವಸ್ತು ಕೊಡಿಸಲು ಸಾಧ್ಯವಾಗಿಲ್ಲ.

ಅವಲಂಬಿತರ ಆರೋಗ್ಯ ಕಾಳಜಿ ಮಾಡಲಾಗುತ್ತಿಲ್ಲ' ಎಂದು ಕೊಪ್ಪಳ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀನಿವಾಸ ಚಿತ್ರಗಾರ, ಬಾಳಪ್ಪ ಬೇಸರ ವ್ಯಕ್ತಪಡಿಸಿದರು.

## ಬಾರದ ಮಳೆಯಿಂದ ಬೆಳೆದ ಕಡಲೆ ಈಳುವರಿ ಕುಂಟಿತ

**ಯಲಬುರ್ಗಾ :** ಈ ವರ್ಷದ ಮುಂಗಾರಿನಆರಂಭದಲ್ಲಿ ಸುರಿದಅಲ್ಪ ಮಳೆ ರೈತರಲ್ಲಿ ಮೂಡಿಸಿದ ಮಂದಹಾಸ ಬಹುಕಾಲ ಉಳಿಯಲಿಲ್ಲ, ನಂತರ ಸಕಾಲದಲ್ಲಿ ಮಳೆ ಸುರಿಯದಕಾರಣ ಮತ್ತೆರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ತಾಲ್ಲೂಕಿನ ಹೊಸಳ್ಳಿ ಚಿಕ್ಕೊಪ್ಪ, ಮುಧೋಳ, ಕರಮುಡಿ, ತೊಂಡಿಹಾಳ, ಬಂಡಿಹಾಳ, ಹಿರೇಮ್ಯಾಗೇರಿ, ಸಂಗನಾಳ, ಕಲ್ಲೂರು ಸೇರಿ ವಿವಿಧೆಡೆ ಹಿಂಗಾರು ಹಂಗಾಮಿನಲ್ಲಿ ಹೆಚ್ಚಾಗಿ ಕಡಲೆ ಬೆಳೆಯಲಾಗಿದೆ. ಆದರೆ ಸಕಾಲಕ್ಕೆ ಮಳೆ ಆಗದೇತೇವಾಂಶಕೊರತೆ ಹಾಗೂ ಚಳಿಯ ಅಭಾವದಿಂದಕಡಲೆ ಬೆಳೆ ಇಳುವರಿ ಕುಸಿದಿದೆ.

ಎಕರೆಗೆ 2 ಕ್ವಿಂಟಾಲ್: ಹೋಬಳಿಯ ಹಲವಡೆ ಹಿಂಗಾರು ಹಂಗಾಮಿನಲ್ಲಿಅಧಿಕ ಪ್ರಮಾಣದಲ್ಲಿಕಡಲೆ ಬೆಳೆಯಲಾಗಿದೆ.ಫಸಲಿನ ರಾಶಿ ಮಾಡುವಕಾರ್ಯ ಭರದಿಂದ ಸಾಗಿದ್ದರೂ ಇಳುವರಿ ಮಾತ್ರತೀವ್ರವಾಗಿ ಕುಸಿದಿದೆ. ಪ್ರತಿ ಬಾರಿ ಎಕರೆಗೆ 5ರಿಂದ 6 ಕ್ವಿಂಟಾಲ್



ಇಳುವರಿ ಬರುತ್ತಿತ್ತು.ಈ ಬಾರಿಎರಡುಕ್ವಿಂಟಾಲ್‌ದಾಟದಿರುವುದುರೈತರ ನಿದ್ದೆಗಡೆಸಿದೆ.ಹೆಚ್ಚು ಖರ್ಚು: ಕಪ್ಪು ಮಣ್ಣು ಪ್ರದೇಶದಲ್ಲಿ ಹಿಂಗಾರು ಹಂಗಾಮಿಗೆ ಕಡಲೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ.

ಈ ಬೆಳೆಗೆ ಕೀಟಬಾಧೆ ಹೆಚ್ಚು.ಬಿತ್ತನೆ ಮಾಡಿ ಬೆಳೆಗೆ ಹೂ ಹಾಗೂ ಕಾಯಿ ಹಿಡಿಯವರೆಗೂ ಕೀಟಗಳಿಂದ ಸಂರಕ್ಷಿಸಲುಕೀಟನಾಶಕ ಸಿಂಪಡಿಸಬೇಕು.ಎಕರೆಗೆ ಕನಿಷ್ಠ 6 ರಿಂದ 7 ಸಾವಿರರೂ.ಖರ್ಚು ಮಾಡಬೇಕಾಗುತ್ತದೆ. ರಾಶಿ ಮಾಡಲು 8 ರಿಂದ 10 ಸಾವಿರರೂ.ಖರ್ಚಾಗುತ್ತದೆ. ಖರ್ಚು ಹೆಚ್ಚಾದರೂಎಕರೆಗೆ 2 ಕ್ವಿಂಟಾಲ್ ಇಳುವರಿ ಬಂದಿರುವುದು ನುಗ್ಗಲಾರದತುತ್ತಾಗಿ ಪರಿಣಮಿಸಿದೆ.ಕಳೆದ ಮೂರ್ನಾಲ್ಕು ವರ್ಷಗಳಿಂದ ಕಡಿಮೆ ಮಳೆ ಆಗುತ್ತಿದ್ದು, ಈ ವರ್ಷ ಮುಂಗಾರು, ಹಿಂಗಾರು ಮಳೆ ಇಲ್ಲದೆರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಹಿಂಗಾರು ಬೆಳೆಗೆ ಮಳೆಗಿಂತ ತೇವಾಂಶ ಮತ್ತು ಚಳಿ ಅಗತ್ಯ.ಈ ಬಾರಿಅದೂಕಡಿಮೆಯಾಗಿಕಡಲೆ ಬೆಳೆ ಇಳುವರಿ ಕುಸಿದಿದೆ. ಬಾಕ್ಸ್ ಸುದ್ದಿ ಹೋದ ವರ್ಷ ಒಳ್ಳೆ ಮಳೆಯಾಗಿತ್ತು ಚಲೋ ಬೆಳೆ ಬಂದಿತ್ತು ಈ ವರ್ಷನೂ ಮಳೆ ಸರಿಯಾಗಿ ಬೀಳಬಹುದೆಂಬ ಆಸೆಯಿಂದದುಬಾರಿ ಮೆಕ್ಕೆಜೋಳ ಬೀಜ ಖರೀದಿಸಿ ಬಿತ್ತಿದ್ವೀ... ಆದ್ರೆ ಮಾರುದ್ದ ಬೆಳೆದು ನಿಂತಿದ್ದ ಬೆಳೆ ದಿನದಿಂದ ದಿನಕ್ಕೆ ಬಾಡಿ ಹೋಯ್ತಿರ್ರಿ ಮನಸ್ಸಿಗೆ ಬಾಳ ನೋವು ಆಗ್ತೈತ್ರಿ.ಸರ್ಕಾರಕೂಡಲೇ ನೆರವು ನೀಡಿದರೆಜೀವನಕ್ಕೆಒಂದುದಾರಿಆಕೈತ್ರಿ. s ಸಂಗನಗೌಡ ಪಾಟೀಲ್‌ರೈತಚಿಕ್ಕೊಪ್ಪ

## ನೂತನ ಪೌರಾಯುಕ್ತ ಸುರೇಶ ಬಬಲಾದ್ ಅವರಿಗೆ ಸನ್ಮಾನ

**ಕೊಪ್ಪಳ :** ಕೊಪ್ಪಳ ನಗರಸಭೆಗೆ ನೂತನ ಪೌರಾಯುಕ್ತರಾಗಿ ಸರ್ಕಾರದಿಂದ ನೇಮಕಗೊಂಡು ಇಲ್ಲಿಗೆ ಆಗಮಿಸಿದ ಸುರೇಶ್ ಜಿ ಬಬಲಾದ್ ರವರಿಗೆ ಸೋಮವಾರದಂದು ಬಿ ಎಸ್ ಪಿ ಪಕ್ಷದ ಕೊಪ್ಪಳ ಜಿಲ್ಲಾ ಉಸ್ತುವಾರಿಯಾಗಿರುವ ಮಹಬೂಬ್ ಖಾನ್ ರವರು ಭೇಟಿಯಾಗಿ ಅವರನ್ನು ಸನ್ಮಾನಿಸಿ ಆತ್ಮೀಯವಾಗಿ ಸ್ವಾಗತಿಸಿದರು, ನಂತರ ಅವರೊಂದಿಗೆ ಮಾತನಾಡಿ ನಗರದ ಸಾರ್ವಜನಿಕರಿಗೆ ನಗರಸಭೆ ವತಿಯಿಂದ ಸಿಗಬಹುದಾದ ಸೌಕರ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿಮತ್ತುಸ್ವಚ್ಛತೆಕುಡಿಯುವನೀರಿನಸಮರ??ಕ ವ್ಯವಸ್ಥೆ ಮತ್ತು ವಿದ್ಯುತ್ ದೀಪ ಗಳ ಅಳವಡಿಕೆ ಇತ್ಯಾದಿ ವ್ಯವಸ್ಥೆ ಕಲ್ಪಿಸಿಕೊಡಲು ಅವರಲ್ಲಿ ಮೆಹಬೂಬ್ ಖಾನ್ ಜನರ ಪರವಾಗಿ ಮನವಿ ಮಾಡಿ ಕೊಂಡರು, ಅವರ ಮನವಿಗೆ ನೇರ ಸ್ಪಂದನೆ ನೀಡಿದ ನೂತನ ಪೌರಾಯುಕ್ತಾರಾದ ಸುರೇಶ್ ಬಬಲಾದ ರವರು ಮಾತನಾಡಿ ನಗರಸಭೆಯ ಅಧ್ಯಕ್ಷರ ನೇತೃತ್ವದಲ್ಲಿ



ಸರ್ವ ಸದಸ್ಯರ ಸಹಕಾರದೊಂದಿಗೆ ಜಿಲ್ಲಾ ಆಡಳಿತದ ಮಾರ್ಗದರ್ಶನದಲ್ಲಿ ಒಳ್ಳೆಯ ಕೆಲಸ ಮಾಡಿ ನಗರ ಸಭೆಗೆ ಬರುವ ಸಾರ್ವಜನಿಕರಿಗೆ ಸೌಕರ್ಯಗಳನ್ನು ಅವರ ಕೆಲಸ ಕಾರ್ಯಗಳನ್ನು ಮಾಡುವ ನಿಟ್ಟಿನಲ್ಲಿ ಶ್ರಮಿಸುವೆ ಎಂದು ಅವರು ಹೇಳಿದರು.

## ಸಮಾಜದ ದುರಾದೃಷ್ಟಗಳು ಕಾದಂಬರಿಗಳಲ್ಲಿ ಬಿಂಬಿತವಾಗಿವೆ; ಈಶ್ವರ ಹತ್ತಿ

**ಕೊಪ್ಪಳ :** ಸಮಾಜದ ದುರಾದೃಷ್ಟಗಳು, ಒರೆಕೋರೆಗಳು ಕಾದಂಬರಿಗಳಲ್ಲಿಪಾತ್ರಗಳಮೂಲಕಬಿಂಬಿಸಲಾಗಿದೆಎಂದು ಹಿರಿಯ ಸಾಹಿತಿಈಶ್ವರ ಹತ್ತಿಯವರು ನುಡಿದರು. ಅವರುಶಕ್ತಿ ಶಾರದ ಮೇಳ ಮತ್ತು ಬೆರಗು ಪ್ರಕಾಶನ, ಭಾಗ್ಯನಗರದ ವತಿಯಿಂದ ನಡೆದ56ನೇ 'ಚಿಂತನ–ಮಂಥನ' ಕೂಟದಲ್ಲಿ ಮೌನೇಶ ನವಲಹಳ್ಳಿಯವರ 'ನೀಲಿ ಹೊತ್ತಿಗೆ' ಕಾದಂಬರಿ ಅವಲೋಕನ ಮತ್ತು ನಿವೃತ್ತ ಪ್ರಾಧ್ಯಾಪಕ ಡಾ.ಬಸವರಾಜ ಪೂಜಾರವರಿಗೆ ವಿಶೇಷ ಸನ್ಮಾನ ಕಾರ್ಯಕ್ರಮದಲ್ಲಿ ಕಾದಂಬರಿ ಅವಲೋಕನ ಮಾಡುತ್ತಾ ಮಾತನಾಡಿದರು. ಇಂದು ಮಾನವಿಯತೆಇಲ್ಲದಂತಹ ವಾತವರಣ ನಿರ್ಮಾಣವಾಗಿದೆ.ಅಂತಹ ಸನ್ನಿವೇಶಗಳನ್ನು ಈ ಕಾದಂಬರಿಯಲ್ಲಿಚಿತ್ರಿಸಲಾಗಿದೆ.ಇಂದುಮನುಷ್ಯ ಸಂಬಂಧಗಳು ಹೇಗೆ ಕಲುಷಿತಗೊಂಡಿವೆಎಂಬುದುಸಹ ಈ ಕಾದಂಬರಿಯಲ್ಲಿಚಿತ್ರಿಸಲಾಗಿದೆಎಂದರು.ಈ ಕಾರ್ಯಕ್ರಮದಲ್ಲಿಕಾದಂಬರಿಕಾರ ಮೌನೇಶ ನವಲಹಳ್ಳಿ ಹಾಗೂ ಪ್ರಕಾಶಕಟಿ.ಎಸ್‌ಗೊರವರಇವರನ್ನು ಸನ್ಮಾನಿಸಲಾಯಿತು. ಜೊತೆಗೆ ಸುಮಾರು 32 ವರ್ಷಗಳ ಕಾಲ ಪ್ರಾಧ್ಯಾಪಕ ಸೇವೆಯಜೊತೆಗೆಕನ್ನಡ ಸಾಹಿತ್ಯದಲ್ಲಿ ಹಲವಾರು ಕೃತಿಗಳಮೂಲಕಸೇವೆಸಲ್ಲಿಸಿದಡಾ.ಬಸವರಾಜ ಪೂಜಾರವರನ್ನು ಶಕ್ತಿ ಶಾರದ ಮೇಳದಿಂದ ವಿಶೇಷವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಅಧ್ಯಕ್ಷತೆಯನ್ನು ವಹಿಸಿದ್ದ ನಿವೃತ್ತ ಪ್ರಾಂಶುಪಾಲರಾದ ಪ್ರೊ.ತಿಮ್ಮಾರೆಡ್ಡಿ ಮೇಟಿಯವರು ನಿವೃತ್ತ ಪ್ರಾಧ್ಯಾಪಕರಿಗೆಸನ್ಮಾನಿಸಿಗೌರವಿಸುತ್ತಿರುವುದುಆರೋಗ್ಯಕರ ಬೆಳವಣಿಗೆ ಎಂದರು.ವೇದಿಕೆ ಮೇಲೆ ಶಕ್ತಿ ಶಾರದೆ ಮೇಳದ ಸಂಚಾಲಕರಾದಡಿ.ಎಮ್ ಬಡಿಗೇರವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿಡಾ.ಪಾರ್ವತಿಕನಕಗಿರಿ, ಡಾ.ಪ್ರವೀಣ ಪಾಟೀಲ್, ಡಾ.ಪ್ರಕಾಶ ಬಳ್ಳಾರಿ, ಮಹೇಶ ಬಳ್ಳಾರಿ, ಸಕ್ರ??ಪಹೊಸಬಾವಿ ಮುಂತಾದವರುಡಾ.ಬಸವರಾಜ ಪೂಜಾರವರಕುರಿತುಮಾತನಾಡಿದರು.

## ಡೋಣಿ ನದಿ ಪ್ರವಾಹ ಪೀಡಿತ ಪ್ರದೇಶದಲ್ಲಿ ಭೂ ಪರಿವರ್ತನೆಅನುಮತಿ ನೀಡಿದ್ದನ್ನು ರದ್ದು ಪಡಿಸಲು ಆಗ್ರಹ



**ವಿಜಯಪುರ :** ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಸಾರವಾಡ ಗ್ರಾಮದ ಡೋಣಿ ನದಿ ಪ್ರವಾಹ ಪೀಡಿತ ಪ್ರದೇಶವೆಂದು ಘೋಷಿಸಿ ಪುನರ್ವಸತಿ ಕಲ್ಪಿಸಲು ಗ್ರಾಮದ ಜನರು ಸರ್ಕಾರಕ್ಕೆ ಹಲವಾರು ದಿನಗಳಿಂದಒತ್ತಾಯಮಾಡುತ್ತಾಬಂದಿದ್ದು ಇರುತ್ತದೆ. ಸದರಿ ವಿಷಯ ಸರ್ಕಾರದ ಗಮನದಲ್ಲಿದ್ದರೂ ಕೂಡ ಡೋಣಿ ಪ್ರವಾಹ ಪೀಡಿತ ಪ್ರದೇಶದಲ್ಲಿ ವಸತಿ ಉದ್ದೇಶಕ್ಕಾಗಿ ಜಮೀನುಗಳನ್ನು ಭೂ ಪರಿವರ್ತನೆ ಮಾಡಲು ಜಿಲ್ಲಾಡಳಿತದಿಂದ ಅನುಮತಿ ನೀಡಿದ್ದು ಇರುತ್ತದೆ. ತಕ್ಷಣ ಈ ಸಮಸ್ಯೆಯನ್ನು ಅರಿತುಕೊಂಡು ಸಾರ್ವಜನಿಕರಿಗೆ ನೆಮ್ಮದಿಯ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಈ ಹಿಂದೆ ಇದ್ದ ಜಿಲ್ಲಾಧಿಕಾರಿ ಟಿ. ಭೂಬಾಲನ್ ಅವರಿಗೆ ಮನವಿ ಸಲ್ಲಿಸಿದ್ದರು ತಹಶೀಲ್ದಾರ ಹಾಗೂ ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರಿಗೆ ಕ್ರಮ ಜರುಗಿಸಲು ತಿಳಿಸಿರುತ್ತಾರೆ ಆದರೆ ಭೂ ಪರಿವರ್ತನೆ ಮಾಡಲು ಆದೇಶ ಮಾಡಿದನ್ನು ಹಿಂಪಡೆದಿರುವುದಿಲ್ಲ. ಇದರಿಂದ ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದಾರೆ. ತಕ್ಷಣ ಈಗ ಜಿಲ್ಲಾಧಿಕಾರಿಯಾಗಿ ಆಗಮಿಸಿದ ಡಾ. ಆನಂದ ಕೆ. ತಾವುಗಳು ಈ ಗಂಭೀರ ವಿಷಯವನ್ನು ಪರಿಗಣಿಸಬೇಕೆಂದು ಗಮನಕ್ಕೆ ತಂದಾಗ ಮನವಿಗೆ ಸ್ಪಂಧಿಸಿದ ಜಿಲ್ಲಾಧಿಕಾರಿ ಸದರಿ ವಿಷಯದ ಕುರಿತು ವಿಚಾರಿಸುತ್ತೇನೆಂದು ಭರವಸೆ ನೀಡಿದ್ದಾರೆ. ಈ ಸಂದರ್ಭದಲ್ಲಿ ವಾಲ್ಮೀಕಿ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಟಗಿ, ಎಮ್.ಎಸ್. ಪಾಟೀಲ, ಆನಂದ ಸೋಮಕನವರ ಮುಂತಾದವರು ಇದ್ದರು.

## ಬಸವೇಶ್ವರ ಏತ ನೀರಾವರಿಯಿಂದ ತುಂಬಿದ ಕೆರೆ, ಬಾಂದಾರುಗಳು

**ಸಂಬರಗಿ :** ಖಿಳಿಗಾಂವ್ ಬಸವೇಶ್ವರಏತ ನೀರಾವರಿ ಯೋಜನೆಯಿಂದ ಗಡಿ ಭಾಗದ 15 ಬಾಂದಾರುಗಳು, ನೀರಿನಿಂದ ತುಂಬಿದ ಮೂರು ಕೆರೆಗಳು, ಬರ ಪ್ರದೇಶಗಳಲ್ಲಿನ ಬಾವಿಗಳು ತುಂಬಿ ಹರಿಯುತ್ತಿವೆ. ಆದ್ದರಿಂದ ಇದು ರೈತರಿಗೆ ಅನುಕೂಲಕರವಾಗಿದೆ. ದೇಶ ಸ್ವಾತಂತ್ರ್ಯ ಪಡೆದಾಗಿನಿಂದ ಗಡಿ ಭಾಗದ ರೈತರು ಇಷ್ಟೊಂದು ನೀರು ಬಂದಿದ್ದನ್ನೇ ನೋಡಿರಲಿಲ್ಲ. ಪ್ರಥಮ ಬಾರಿಗೆ ರೈತರು ತೃಪ್ತರಾಗಿದ್ದಾರೆ.

ಗಡಿ ಭಾಗದ ಅನೇಕ ಹಳ್ಳಿಗಳಲ್ಲಿ, ಮುಖ್ಯ ಅಗ್ರಾಣಿ ನದಿ ಇದ್ದು 15 ಬಂದಾರಗಳು ಎಂದಿಗೂ ನೀರಿನಿಂದ ತುಂಬಿಲ್ಲ, ಆದರೆ ಖಿಳೇಗಾಂವ್ ಬಸವೇಶ್ವರ ಏತ ನೀರಾವರಿ ಯೋಜನೆಯ ಮೊದಲ ಹಂತದ ನಂತರ, ಹದಿನೈದು ಹಳ್ಳಿಗಳು ಅದರಿಂದ ಪ್ರಯೋಜನ ಪಡೆದಿವೆ ಮತ್ತು ಹದಿನೈದು ಹಳ್ಳಿಗಳ ಬಾಂದಾರ ಕೆರೆಗಳು ನೀರಿನಿಂದ ತುಂಬಿವೆ.



ಹಲವಾರು ವರ್ಷಗಳಿಂದ ರಾಜಕಿಯ ಮುಖಂಡರು ಕೇವಲ ಭರವಸೆಗಳನ್ನು ನೀಡುತ್ತ ತಮ್ಮ ಸಮಯವನ್ನು ವ್ಯರ್ಥ ಮಾಡಿದರು. ಪ್ರತಿ ಚುನಾವಣೆಯಲ್ಲಿ ಮತಗಳನ್ನು ಸೆಳೆಯಲು ಈ ಯೋಜನೆಗಳನ್ನು ರಾಜಕೀಯ ವಿಷಯವನ್ನಾಗಿ ಬಳಸಿಕೊಳ್ಳಲಾಗುತ್ತಿತ್ತು. ಆದರೆ ಶಾಸಕರಾದ ಲಕ್ಷ್ಮಣ ಸವದಿ ಮತ್ತು ರಾಜು ಕಾಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾನು ನಿಮ್ಮ ಗ್ರಾಮಕ್ಕೆ ನೀರು ತರುವ ಮೂಲಕ ಮಾತ್ರ ನಿಮ್ಮ ಭಾಗಕ್ಕೆ ಕಾಲಿಡುತ್ತೇನೆ ಎಂದು ಭರವಸೆ ನೀಡಿದರು. ಹೇಳಿದಂತೆ ಅವರು ಈ ಭಾಗದ ಅನೇಕ ಹಳ್ಳಿಗಳಿಗೆ ನೀರು ತರುವ ಮೂಲಕ ಮಾತ್ರ ಭೇಟಿ ನೀಡಿದರು. ಮದಭಾವಿ, ಬೋಮನಾಳ, ಅರಳಹಟ್ಟಿ, ಜಕಾರಹಟಿ, ಪಾಂಡೇಗಾಂವ್, ಶಿರೂರ್, ಶಿವನೂರ್ ಮೇಯನೇಹಟಿ, ಜಂಬಗಿ ಈ ಭಾಗದಲ್ಲಿ 25 ವರ್ಷಗಳಿಂದ ನಿರ್ಮಿಸಲಾಗಿದ್ದು, ಬಂದಾರ ಹಾಗೂ ಕೆರೆಗಳು ಎಂದಿಗೂ ತುಂಬಿಲ್ಲ ಅಥವಾ ಮಳೆ ನೀರು ಬಂದಿಲ್ಲ. ರೈತರು ಸಂಕಷ್ಟದಲ್ಲಿದ್ದಾಗ, ರಾಜ್ಯದ ಕಾಂಗ್ರೆಸ್ ಸರ್ಕಾರ ಈ ಪ್ರದೇಶದ ಹಳ್ಳಿಗಳಿಗೆ ವಿಶೇಷ ಅನುದಾನ ನೀಡಿ ನೀರಿನಿಂದ ಬಂದಾರಗಳನ್ನು ತುಂಬಿಸಿತ್ತು. ಆದರೆ ಈ ಬಾರಿ ಏತ ನೀರಾವರಿ ಯೋಜನೆಯಿಂದ ಈ ವರ್ಷದ ಬೆಳೆಗಳು ಅನುಕೂಲಕರವಾಗಿವೆ.

ಈ ಕುರಿತುಸಂಬರಗಿ ಪಿಕೆಪಿಎಸ್ ಉಪಾಧ್ಯಕ್ಷ ಅಣ್ಣಪ್ಪಾ ಮಿಸಳ ಮಾತನಾಡಿ ಇಬ್ಬರೂ ಶಾಸಕರ ಪ್ರಯತ್ನದಿಂದಾಗಿ ಈ ಭಾಗಕ್ಕೆ ನೀರು ಬಂದಿದೆ. ಬಾಂದಾರ ಮತ್ತು ಕೆರೆಗಳು ತುಂಬಿವೆ. ಅದೇ ಸಮಯದಲ್ಲಿ, ಗಡಿ ಪ್ರದೇಶಗಳಲ್ಲಿ ಹೊಸಬಂದಾರುಗಳನ್ನುನಿರ್ಮಿಸಿ ನೀರು ಸಂಗ್ರಹಿಸಲಾಗುವುದು. ರೈತರು ಶಾಶ್ವತವಾಗಿ ಬರ ಮುಕ್ತರಾಗಿ ಸಂತೋಷದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ಪ್ರಯತ್ನಗಳನ್ನು ಮಾಡಬೇಕೆಂದು ಅವರು ಒತ್ತಾಯಿಸಿದರು.

## ಕೊಪ್ಪರ ಸಂಸ್ಥೆಯಿಂದ ಅಳಿವಿನಂಚಿನಲ್ಲಿರುವ ಗಿಡಗಳ ಬೀಜಗಳ ಪ್ರಸಾರ

**ಗದಗ :** ಕೊಪ್ಪರ ಅಕ್ಯಾಡೆಮಿ, ಕೊಪ್ಪರ ಆಯುರ್ವೆದ ಕೇಂದ್ರ, ಕೊಪ್ಪರ ವಾಸ್ತು ಕೇಂದ್ರ ಮತ್ತು ಕೊಪ್ಪರ ಸರ್ ತಂಡದಿಂದ ಅಳಿವಿನಂಚಿನಲ್ಲಿರುವ ಗಿಡಗಳ ಬೀಜಗಳನ್ನು ರಾಜ್ಯಾದ್ಯಂತ ಸಂಗ್ರಹಿಸಿ ಗದಗ ಜಿಲ್ಲೆಯ ಕಪ್ಪತ ಗುಡ್ಡ, ಮಾಗಡಿ ಕೆರೆ, ಶೆಟ್ಟಿ ಕೆರೆ, ಹೊಳಲಮ್ಮ ಗುಡ್ಡ, ವರವಿ, ವೆಂಕಟಾಪುರ, ನಾಗಾವಿ, ಕಳಸಾಪುರ, ಬೆಳದಡಿ, ನರಗುಂದ, ರೋಣ, ಲಕ್ಷ್ಮೇಶ್ವರ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಬೆಳೆಸಿ ಪೋಷಿಸುವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಜುಲೈ 20 ರಂದು ಇದರ ಕುರಿತು, ಪರಿಸರ ಪ್ರೇಮಿಗಳ ಹಾಗೂ ಸಮಾನ ಮನಸ್ಕರ ಪೂರ್ವಭಾವಿ ಸಭೆಯನ್ನು ಕರೆಯಲಾಗುತ್ತಿದೆ. ಆದ್ದರಿಂದ ಎಲ್ಲ ಪರಿಸರ ಪ್ರೇಮಿಗಳು ಆಗಮಿಸಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕೊಪ್ಪರ ಸರ್ ತಂಡದ ಸಾರ್ವಜನಿಕ ಸಂಪರ್ಕಾಧಿಕಾರಿ ಮೌನೇಶ ಭಜಂತ್ರಿಯವರು ಕೋರಿದ್ದಾರೆ.

## ಜಾನಪದ ಕಲಾವಿದ ಗುರುನಾಥಗೆ ತಾಲೂಕಕುರುಬರ ಸಂಘದಿಂದ ಸನ್ಮಾನ



**ದೇವರಹಿಪ್ಪರಗಿ :** ತಾಲ್ಲೂಕು ಕುರುಬರ ಸಂಘದ ಪರವಾಗಿ ಇತ್ತೀಚಿಗೆ ಬಸವಚೇತನ ಪ್ರಶಸ್ತಿ ವಿಜೇತ ಜಾನಪದ ಕಲಾವಿದ ಗುರುನಾಥ ಮುರಡಿ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.ಪಟ್ಟಣದ ಪ್ರವಾಸಿ ಮಂದಿರದಲ್ಲಿ ರವಿವಾರದಂದು ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನಿಸಿ ಹಲವಾರು ಮುಖಂಡರು ಮಾತನಾಡಿ, ಜಾನಪದ(ಹಾಡಕಿ)ಕ್ಷೇತ್ರದಲ್ಲಿಸುಮಾರು20ವರ್ಷಗಳ ಕಾಲ ಕೌಶಲ್ಯ ಹಾಗೂ ತಮ್ಮ ಸಮರ್ಥ್ಯದ ಮೂಲಕ ಉತ್ತರ ಕರ್ನಾಟಕದಲ್ಲಿ ಹೆಸರುವಾಸಿಯಾಗಿದ್ದಾರೆ. ಹಲವಾರು ರಾಜ್ಯ,ಜಿಲ್ಲಾ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪಡೆದು ಸದಾ ಕ್ರಿಯಾಶೀಲ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಯಾಗಿದ್ದು ನಮ್ಮ ಸಮಾಜದ ಹೆಮ್ಮೆ ಇಂತಹ ಸಾಧಕರನ್ನು ಸನ್ಮಾನಿಸುವ ಮೂಲಕ ಅವರು ತಮ್ಮ ಕ್ಷೇತ್ರದಲ್ಲಿ ಇನ್ನು ಹೆಚ್ಚಿನ ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಮುಖಂಡರುಗಳಾದ ಸಿದ್ದು ಬುಳ್ಳಾ ,ಪರಮಾನಂದ ಪೂಜಾರಿ,ಶರಣು ಪೂಜಾರಿ,ಸುನಿಲ ಮಾಗಿ,ಪ್ರಕಾಶ ದೊಡಮನಿ, ಆನಂದ ವಗ್ಗರ ,ಭೀರು ದೇವೂರ,ಶಿವಾನಂದ ಕೆರುಟಗಿ, ರಾವುತ ಕರೆಕ್ಕಿ ಸಿದ್ದು ಬೊಮ್ಮನಳ್ಳಿ ,ಸಿದ್ದು ದೊಡ್ಡಿಣಿ ,ಶರಣು ,ಮನಗೂಳಿ ,ಜಕ್ಕು ದೊಡ್ಡಿಣಿ, ಭೀಮು ಬುಳ್ಳಾ ,ಯಮನು ದೇವಣಗಾಂವ,ಯಲ್ಲು,ಮಾಳು ಹೊನ್ನಮಿಸಿ,ಚಂದು ಪೂಜಾರಿ ಅಮ್ಮೋಗಿ ,ಕಗ್ಗೋಡ, ಕರೆಪ್ಪ ಕಾಮನಕೇರಿ ರಾಮು ವಗ್ಗರ ವಿಠ್ಠಲ ಮಣ್ಣೂರ,ಹಣಮಂತ ಇಬ್ರಾಹಿಮಪುರ ಸೇರಿದಂತೆ ಹಲವಾರು ಜನ ಸದಸ್ಯರು ಉಪಸ್ಥಿತರಿದ್ದರು.ಫೋಟೋ 13ಡಿಎಚಪಿ2

## ಭೀಮಾತೀರದಲ್ಲಿ ರೌಡಿಶೀಟರ್ ಹತ್ಯೆ.!!

### ರಕ್ತದ ಮಡುವಿನಲ್ಲಿ ಹಂತಕ ಬಾಗಪ್ಪನ ಶಿಷ್ಯ ಸುಶೀಲ್ ಕಾಳೆ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ಭೀಮಾತೀರದ ಕುಖ್ಯಾತಿಯ ವಿಜಯಪುರದಲ್ಲಿ ರೌಡಿಶೀಟರ್ ಹತ್ಯೆ ಜನರನ್ನ ಬೆಚ್ಚಿಬೀಳಿಸಿದೆ. ಒಂದು ಸಮಯದಲ್ಲಿ ಹಂತಕ ಬಾಗಪ್ಪ ಹರಿಜನನ ಸಹಚರನಾಗಿದ್ದ ನರ್ಸ್ ಈಗ ಬರ್ಬರವಾಗಿ ಹತ್ಯೆಯಾಗಿದ್ದಾನೆ. ಇತ್ತೀಚೆಗೆ ಬಾಗಪ್ಪನ ಹತ್ಯೆ ಬಳಿಕ ಈಗ ಆಪ್ತನ ಹತ್ಯೆ ಹಲವು ಅನುಮಾನಗಳನ್ನ ಮೂಡಿಸಿದೆ.

ಸುಶೀಲ್ ಕಾಳೆ ವಿಜಯಪುರ ನಗರದ ಪ್ರತಿಷ್ಟಿತ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ. ಹಾಗಂತ ಈತ ಸಾಮಾನ್ಯದವನಲ್ಲ.

ಒಂದು ಸಮಯದಲ್ಲಿ ಭೀಮಾತೀರದ ಕುಖ್ಯಾತ ಹಂತಕ ಬಾಗಪ್ಪ ಹರಿಜನ ಸಹಚರ ಆಗಿದ್ದ. ಆದರೆ ಅದೇನಾಗಿ–ತ್ತು ಗೊತ್ತಿಲ್ಲ, ಬಾಗಪ್ಪನಿಂದ ದೂರವಾಗಿ ಫೈನಾನ್ಸ್ ಕೆಲಸ ಅಂತ ಓಡಾಡಿಕೊಂಡಿದ್ದ. ಆದರೆ ಸೋಮವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ನಾಲ್ಕು ಜನರ ಗುಂಪು ಮಾರಕಾಸ್ತ್ರಗಳಿಂದ ಅಟ್ಯಾಕ್ ಮಾಡಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಬಾಗಪ್ಪನ ನಂತರ ಬಾಗಪ್ಪನ ಶಿಷ್ಯ ಸುಶೀಲ್ ಕಾಳೆಯ ಹತ್ಯೆ ವಿಜಯಪುರದ ನಗರದಲ್ಲೆ ನಡೆದಿರೋದು ಜನರನ್ನ ಬೆಚ್ಚಿ ಬೀಳಿಸಿದೆ. ಇನ್ನೂ ಬಾಗಪ್ಪನ ಹತ್ಯೆಯಾಗಿ 3 ತಿಂಗಳು ಕಳೆದಿಲ್ಲ. ಅಷ್ಟರಲ್ಲೆ ಆತನ ಹಳೆ ಶಿಷ್ಯನ ಬರ್ಬರ ಹತ್ಯೆ ಆಗಿದ್ದು ಹಲವು ಅನುಮಾನಗಳನ್ನ ಮೂಡಿಸಿದೆ.

ಅಂದಹಾಗೇ ಸುಶೀಲ್ ಕಾಳೆ ಭೀಮಾ ತೀರದಲ್ಲಿ ನಡೆದ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈ ಪೈಕಿ ಕಳೆದ 2014 ಅಗಸ್ಟ್ 23 ರಂದು ವಿಜಯಪುರ ನಗರದಲ್ಲಿ ನಡೆದಿದ್ದ ಬಸ್ ಕಂಡಕ್ಟರ್ ಸುರೇಶ ಲಾಳಸಂಗಿ ಕೊಲೆ ಪ್ರಕರಣದಲ್ಲು ಈತ ಪ್ರಮುಖ ಆರೋಪಿಯಾಗಿದ್ದ. ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲು ಈತನ ಮೇಲೆ ಪ್ರಕರಣಗಳು ದಾಖಲಾಗಿದ್ದವು. ಬಳಿಕ ಈತನ ಮೇಲೆ ರೌಡಿಶೀಟ್ ಕೂಡ ಓಪನ್ ಮಾಡಲಾಗಿತ್ತು. ಈ ಕೊಲೆಯ ಹಿಂದೆ ಫೈನಾನ್ಸ್ ಹಣ ಕಾರಣ ಎನ್ನಲಾಗಿದೆ.

ಇನ್ನೂ ಬಾಗಪ್ಪ ಹತ್ಯೆ ಮಾಡಿದ ಆರೋಪಿಗಳಿಗೆ ಸಹಾಯ ಮಾಡಿದ್ದಕ್ಕೆ ಹತ್ಯೆ ಎನ್ನುವ ಮಾತುಗಳು ಇವೆ ಎನ್ನಲಾಗಿದೆ. ಇನ್ನು ಈತ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ನಡೆಸುತ್ತಿದ್ದ ಡ್ಯಾನ್ಸ್ ಬಾರ್ ವಿಚಾರವಾಗಿ ತಕರಾರುಗಳಿದ್ದವು ಎನ್ನಲಾಗಿದೆ. ಹೀಗಾಗಿ ಹತ್ಯೆಯ ಬಗ್ಗೆ ಪೊಲೀಸರ ತನಿಖೆ ಚುರುಕುಗೊಳಿಸಿದ್ದಾರೆ.

ಯುವಕನೊಬ್ಬನಮೇಲೆಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಬರ್ಬರವಾಗಿ ಹತ್ಯೆ ನಡೆಸಿದ ಘಟನೆ ನಗರದ ಎಸ್. ಎಸ್. ರಸ್ತೆಯ ಎಸ್. ಎಸ್. ಕಾಂಪ್ಲೆಕ್ಸ್‌ನಲ್ಲಿ ಇರುವ ಅಮರ ವರ್ಷಿಣಿ ಸಹಕಾರಿ ಬ್ಯಾಂಕಿನಲ್ಲಿ ನಡೆದಿದೆ. ಸುಶೀಲ್ ಕಾಳೆ (43) ಕೊಲೆಗೀಡಾದ ಯುವಕ. ಬ್ಯಾಂಕಿನಲ್ಲಿದ್ದ ಈ ಯುವಕನ ಮೇಲೆ ಮಾರಾಕಸ್ತ್ರಗಳಿಂದ ನಾಲ್ವರು ಹಲ್ಲೆ ಮಾಡಿದ್ದು ತೀವ್ರವಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದ.ತಕ್ಷಣ ಆತನನ್ನು ಚಿಕಿತ್ಸೆಗಾಗಿ ನಗರದ ಬಿಎಲ್ಡಿಇ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಂತಾಜನಕ ಸ್ಥಿತಿಯಲ್ಲಿದ್ದ ಯುವಕ ಕಾಳೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ.

ಸ್ಥಳಕ್ಕೆ ಗಾಂಧಿ ಚೌಕ ಪೋಲಿಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗಾಂಧಿಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸದ್ಯ ವಿಜಯಪುರ ಖಾಕಿ ಪಡೆ ಘಟನೆ ಬಗ್ಗೆ ತೀವ್ರ ತನಿಖೆ ನಡೆಸುತ್ತಿದ್ದು, ಹಂತಕರ ಬಂಧನಕ್ಕೆ ಬಲೆ ಬಿಸಿದ್ದಾರೆಂದು ಪತ್ರಿಕೆ ಸತ್ಯ ಶೋಧನಾ ತಂಡಕ್ಕೆ ಪೊಲೀಸ್ ಅಧಿಕಾ–ರಿಯೊಬ್ಬರು ಮಾಹಿತಿ ನೀಡಿದ್ದಾರೆ.

# ಲೋಕ ಅದಾಲತ್: ರಾಜಿಸಂಧಾನದ ಮೂಲಕ 1,996 ಪ್ರಕರಣ ಇತ್ಯರ್ಥ



**ಬಸವನಬಾಗೇವಾಡಿ :** ತಾಲ್ಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದಲ್ಲಿ ಶನಿವಾರ ರಾಷ್ಟ್ರೀಯ ಲೋಕ ಅದಾಲತ್ ಯಶಸ್ವಿಯಾಗಿ ಜರುಗಿತು.
ಲೋಕ ಅದಾಲತ್‌ನಲ್ಲಿ ನಾಲ್ಕೂ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿನ ಒಟ್ಟು 8,783 ಬಾಕಿ ಪ್ರಕರಣಗಳಲ್ಲಿ 2783 ಪ್ರಕರಣಗಳನ್ನು ಕೈಗೆತ್ತಿಕೊಂಡುಅವುಗಳಲ್ಲಿಒಟ್ಟು1996ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಅದರಲ್ಲಿ ಅಪರಾಧ ಪ್ರಕರಣಗಳು, ಎಂವಿಸಿ ಪ್ರಕರಣಗಳು,ಚೆಕ್‌ಬೌನ್ಸ್‌ಪ್ರಕರಣಗಳು,ಮೆಂಟೇನೆನ್ಸ್ ಪ್ರಕರಣಗಳು, ಪಾಲು ವಾಟ್ನಿ ದಾವೆಗಳು, ಎಲ್‌ಎಸಿ, ಇಪಿ ಪ್ರಕರಣಗಳು, ಎಂವಿಸಿ, ಇಪಿ ಪ್ರಕರಣಗಳು ಅಪರಾಧ ದಂಡ ಪ್ರಕರಣಗಳನ್ನು ರಾಜಿ ಸಂಧಾನ ಮೂಲಕ ಇತ್ಯರ್ಥ ಪಡಿಸಲಾಯಿತು.
ಅಲ್ಲದೇ ಪೂರ್ವಧಾವೆ ಪ್ರಕರಣಗಳಲ್ಲಿ, ಟ್ರಾಫಿಕ್ ಚಲನ್ ಪ್ರಕರಣಗಳು, ಕಂದಾಯ ಇಲಾಖೆಯ ಕಂದಾಯ ಅದಾಲತ್ ಪ್ರಕರಣಗಳು, ಬ್ಯಾಂಕಿನ ಪ್ರಕರಣಗಳು ಹಾಗೂ ಹೆಸ್ಕಾಂ ವಿಭಾಗದ ವಿದ್ಯುತ್ ಬಾಕಿ ಪಾವತಿ ಪ್ರಕರಣಗಳು ಸೇರಿ ಒಟ್ಟು 281052 ಪ್ರಕರಣಗಳಲ್ಲಿ 204470 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿವೆ.
ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರುಹಾಗೂತಾಲೂಕುಕಾನೂನುಸೇವಾ ಸಮಿತಿಯ ಅಧ್ಯಕ್ಷ ಶಶಿಧರ ಎಂ. ಗೌಡ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ ಮುಸಲ್ಮಾರಿ, ಸದಸ್ಯಕಾರ್ಯದರ್ಶಿ ಅಮಿತಘಟ್ಟಿಹಾಗೂಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಈರಪ್ಪ ಢವಳೇಶ್ವರ ಅವರು ಪ್ರಕರಣಗಳನ್ನು ಇತ್ಯರ್ಥಪಡಿಸಿದರು. ವಕೀಲರಾದ ಜಿ.ಎಸ್.ಚಿಂಚೊಳ್ಳಿ, ಐ.ಎ.ಪರಮಗೊಂಡ, ವೈ. ಎನ್.ಲಂಕೇನ್ನವರ,ಬಿ.ಪಿ.ಪತ್ತಾರಸಂಧಾನಕಾರರಾಗಿ ಕಾರ್ಯನಿರ್ವಹಿಸಿದರು.

# ರಾಜ್ಯ ಸರ್ಕಾರದ ಸಾಧನೆ: ಬಹಿರಂಗ ಚರ್ಚೆಗೆ ಬಿಜೆಪಿಗೆ ಮುಖ್ಯಮಂತ್ರಿ ಆಹ್ವಾನ



**ವಿಜಯಪುರ :** ನಮ್ಮದು ಅಭಿವೃದ್ಧಿ ಪರವಾದ ಸರ್ಕಾರ, ಅಭಿವೃದ್ಧಿಯಲ್ಲಿ ನಮ್ಮ ಸರ್ಕಾರದಸಾಧನೆಮತ್ತುಬಿಜೆಪಿಸರ್ಕಾರದ ಸಾಧನೆ ಕುರಿತು ಸಾರ್ವಜನಿಕವಾಗಿ ದಾಖಲೆ ಸಮೇತ ಚರ್ಚೆ ನಡೆಸೋಣ. ಜನರೇ ತೀರ್ಮಾನಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.
ಜಿಲ್ಲೆಯ ಇಂಡಿ ಪಟ್ಟಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ 4559 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.
ನಮ್ಮಸರ್ಕಾರದಲ್ಲಿಮತ್ತುಹಿಂದಿನಕಾಂಗ್ರೆಸ್ ಸರ್ಕಾರಗಳ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿಯನ್ನು ಕೈಯಲ್ಲಿ ಹಿಡಿದು ನೋಡಿ ಎಂದರು.
ಬಿಜೆಪಿ–ಜೆಡಿಎಸ್ ಇಬ್ಬರೂ ರಾಜ್ಯ ಸರ್ಕಾರದಬಳಿಹಣಇಲ್ಲ,ಅಭಿವೃದ್ಧಿನಿಂತು ಹೋಗಿದೆ ಎಂದು ರಾಜಕೀಯ ಕಾರಣಕ್ಕೆ ಅಪಪ್ರಚಾರ ಮಾಡುತ್ತಿದ್ದಾರೆ. ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹರಿಹಾಯ್ದರು.
ವಿರೋಧಿಗಳ ಅಪಪ್ರಚಾರಕ್ಕೆ ಜನ ಕಲ್ಯಾಣ ಕಾರ್ಯಕ್ರಮಗಳ ಮೂಲಕವೇ ಉತ್ತರ ಕೊಡುತ್ತಿದ್ದೇವೆ. ಬರದ ನಾಡಾಗಿದ್ದ ವಿಜಯಪುರವನ್ನು ಹಸಿರು ನಾಡು ಮಾಡಿದ್ದು ನಾವು ಎಂದು ಹೇಳಿದರು.
ಹಿಂದೆ ಬರಗಾಲ ಬಂದಾಗ ಜನ ನಿಂಬೆ ಗಿಡ ಕಿತ್ತು ಹಾಕುತ್ತಿದ್ದರು. ಅದೇ ದಿನ ನಾನು ಇಂಡಿಗೆ ಬಂದಿದ್ದೆ. ನಿಂಬೆ ಬೆಳೆಗಾರರಿಗೆ ಭರವಸೆನೀಡಿದ್ದೆ. ನಿಂಬೆಅಭಿವೃದ್ಧಿಮಂಡಳಿ ಸ್ಥಾಪನೆಮಾಡಿ, ಇದೀಗಲಾಂಛನಬಿಡುಗಡೆ ಮಾಡಿ ನುಡಿದಂತೆ ನಡೆಯುವ ಕಾಂಗ್ರೆಸ್ಸಿನ ಪರಂಪರೆಯನ್ನು ಮುಂದುವರೆಸಿದ್ದೇವೆ ಎಂದರು.
500 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿರುವುದು, 1.23 ಕೋಟಿ ಕುಟುಂಬಗಳು ಗೃಹಲಕ್ಷ್ಮಿ ಹಣ ಪಡೆದಿರುವುದು, 1.64 ಕೋಟಿ ಮನೆಗಳಿಗೆ ಉಚಿತವಾಗಿ 200 ಯೂನಿಟ್ ಹಣ ಪಡೆಯುತ್ತಿರುವುದು, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳ ಮೂಲಕ ಕೋಟಿ ಕೋಟಿ ಕನ್ನಡಿಗರ ಬದುಕಿಗೆ ನೆರವಾಗಿರುವುದು ಅಭಿವೃದ್ಧಿ ಅಲ್ಲವೇ ಎಂದು ಪ್ರಶ್ನಿಸಿದರು.
ಗ್ಯಾರಂಟಿ ಯೋಜನೆ ಗಳಿಗೆ ಪ್ರತಿ ವರ್ಷ 53 ಸಾವಿರ ಕೋಟಿ ವಿನಿಯೋಗಿಸುತ್ತಿದ್ದೇವೆ. 83 ಸಾವಿರ ಕೋಟಿ ಹಣವನ್ನು ಇತರೆ ಅಭಿವೃದ್ಧಿಗೆ ತೆಗೆದಿಟ್ಟುರುವುದು ನಮ್ಮ ಅಭಿವೃದ್ಧಿಪರವಾದ ಆಡಳಿತಕ್ಕೆ ಸ್ಪಷ್ಟ ನಿದರ್ಶನ ಎಂದರು.
ಬಿಜೆಪಿ–ಜೆಡಿಎಸ್‌ನಸುಳ್ಳುಆರೋಪಗಳನ್ನು ನಂಬಬೇಡಿ. ನಿಮ್ಮ ಕಣ್ಣೆದುರಿಗೇ ಇರುವ ಅಭಿವೃದ್ಧಿಯೋಜನೆಗಳನ್ನುಬಿಜೆಪಿಯವರ ಮುಖಕ್ಕೆ ಹಿಡಿದು ಉತ್ತರಿಸಿ ಎಂದರು.
ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಅವರಿಗೆ ಸರ್ಕಾರದಿಂದ ಹಣ ತಂದು ಕ್ಷೇತ್ರದ ಅಭಿವೃದ್ಧಿ ಮಾಡುವುದು ಹೇಗೆಎನ್ನುವುದರಲ್ಲಿಬಹಳಪ್ರಾಮಾಣಿಕರು ಮತ್ತು ಚಾಣಾಕ್ಷರು.
ನಮ್ಮದು ಸರ್ವರ ಅಭಿವೃದ್ಧಿಗೆ ಬದ್ಧವಾಗಿರುವ ಸರ್ಕಾರ ಎಂದರು.
ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ದಿನೇಶ್ ಗುಂಡೂರಾವ್, ಎಂ.ಬಿ.ಪಾಟೀಲ್, ಎಚ್.ಕೆ.ಪಾಟೀಲ್, ಶಿವಾನಂದ ಎಸ್.ಪಾಟೀಲ್, ಶರಣ ಪ್ರಕಾಶ ಪಾಟೀಲ, ಶಾಸಕ ಯಶವಂತ ರಾಯಗೌಡ ಪಾಟೀಲ,ಅಶೋಕ ಮನಗೂಳಿ, ವಿಠಲ ಕಟಕದೊಂಡ, ಹಂಪನಗೌಡಬಾದರ್ಲಿ,ಎಂ.ವೈ.ಪಾಟೀಲ, ವಿಧಾನ ಪರಿಷತ್ ಸದಸ್ಯ ಸುನೀಲ ಗೌಡ ಪಾಟೀಲ, ಮಾಜಿ ಶಾಸಕ ಪ್ರೊ. ರಾಜು ಅಲಗೂರ,ಶರಣಪ್ಪಸುಣಗಾರ,ಮಕಬುಲ್ ಬಾಗವಾನ್, ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಗ್ಯಾರಂಟಿಅನುಷ್ಠಾನಸಮಿತಿಜಿಲ್ಲಾಘಟಕದ ಅಧ್ಯಕ್ಷ ಇಲಿಯಾಸದ ಬೋರಮಣಿ, ಹಮೀದ್ ಮುಶ್ರಫ್,ಪುರಸಭೆ ಅಧ್ಯಕ್ಷ ನಿಂಬಾಜಿ ರಾಠೋಡ, ಜಿಲ್ಲಾಧಿಕಾರಿ ಡಾ.ಆನಂದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಜಿಲ್ಲಾ ಪಂಚಾಯ್ತಿ ಸಿಇಒ ರಿಷಿ ಆನಂದ, ಐಜಿಪಿ ಚೇತನ್ ಸಿಂಗ್ ರಾಠೋಡ ಉಪಸ್ಥಿತರಿಸ್ದರು

# ಇ–ಖಾತಾ ಆಂದೋಲನಕ್ಕೆ ಚಾಲನೆ



**ರಬಕವಿ–ಬನಹಟ್ಟಿ :** ನಗರಸಭೆ ವತಿಯಿಂದ ಬನಹಟ್ಟಿಯ ಈಶ್ವರಲಿಂಗ ಮೈದಾನ ಹಾಗು ರಾಮಪುರದ ನೀಲಕಂಠೇಶ್ವರ ಮಠದಲ್ಲಿ ಈ ಖಾತಾ ಆಂದೋಲನಕ್ಕೆಚಾಲನೆನೀಡಿ,'ಎ'ಮತ್ತು 'ಬಿ' ಖಾತೆ ಯೋಜನೆಯಲ್ಲಿ ಎಲ್ಲರೂ ಭಾಗವಹಿಸುವ ಮೂಲಕ ಪ್ರಯೋಜನ ಪಡೆದುಕೊಳ್ಳಬೇಕೆಂದು ಪೌರಾಯುಕ್ತ ರಮೇಶ ಜಾಧವ ತಿಳಿಸಿದರು.
ಬನಹಟ್ಟಿಯ ಈಶ್ವರಲಿಂಗ ಮೈದಾನದಲ್ಲಿ ಈ ಖಾತಾ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲ ಅಧಿಕೃತ ಆಸ್ತಿ ಮಾಲಿಕರು, ತಮ್ಮ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರ, ದಾನಪತ್ರ, ವಿಭಾಗ, ಹಕ್ಕು, ಚಾಲ್ತಿಯಲ್ಲಿರುವ ಋಣಭಾರ, ನಿವೇಶನ ಬಿಡುಗಡೆ ಹಾಗು ನೀರಿನ ಕರ ರಶೀದಿ ಇತರ ಪೂರಕ ದಾಖಲೆಗಳೊಂದಿಗೆ ಹಾಗು ಸಮರ್ಪಕ ದಾಖಲೆಗಳಿಲ್ಲದ ಅನಧಿಕೃತ ನಿವೇಶನಗಳ ಮಾಲಿಕರೂ ನಗರಸಭೆ ಕಂದಾಯ ವಿಭಾಗಕ್ಕೆ ತೆರಳಿ ಅರ್ಜಿ ಸಲ್ಲಿಸಿ ಎ ಮತ್ತು ಬಿ ಖಾತೆ ಡಿಜಿಟಲ್ ಪತ್ರ ಪಡೆಯಬಹುದೆಂದರು. ಈ ಪ್ರಕ್ರಿಯೆಗೆ ಮೂರು ತಿಂಗಳ ಕಾಲಾವಕಾಶವಿದ್ದು, ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕೆಂದರು.
ಶಿವಾನಂದ ಬುದ್ನಿ, ಅಭಿನಂದನ ಸೋನಾರ, ವಸಂತ ಪವಾರ, ಮುತ್ತಣ್ಣ ಚೌಡಕಿ, ಸುನೀಲ ಬಬಲಾದಿ, ಶಿವಪುತ್ರ ಮೂಡಲಗಿ, ಮುಜಾವರ ಮೊಕಾಶಿ ಸೇ–ರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ವಚನ ಸಾಹಿತ್ಯಕ್ಕೆ ಹಳಕಟ್ಟಿ ಕೊಡುಗೆ ಅಪಾರ: ಗಂಗಾಧರ ಕಸ್ತೂರಿ



**ತಾಳಿಕೋಟೆ :** ಬಸವಾದಿ ಶರಣರ ವಚನಗಳನ್ನು ರಕ್ಷಿಸುವಲ್ಲಿ ಫ.ಗು. ಹಳಕಟ್ಟಿ ಕೊಡುಗೆ ಅಪಾರವಾಗಿದೆ ಎಂದು ಕಸಾಪ ಗೌರವ ಕಾರ್ಯದರ್ಶಿ ವಕೀಲ ಗಂಗಾಧರ ಕಸ್ತೂರಿ ಹೇಳಿದರು.
ತಾಲ್ಲೂಕು ಆಡಳಿತದ ವತಿಯಿಂದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ವಚನ ಪಿತಾಮಹ ಫ.ಗು.ಹಳಕಟ್ಟಿ ಅವರ ಜನ್ಮ ದಿನಾಚರಣೆ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು.
ವಚನಗಳನ್ನು ಮುದ್ರಿಸಿ ಪ್ರಕಟಿಸಲು ಫ.ಗು. ಹಳಕಟ್ಟಿ ಅವರ ಬಳಿ ಹಣ ಇಲ್ಲದಿದ್ದಾಗ ತಮ್ಮ ಸ್ವಂತ ಮನೆಯನ್ನೇ ಮಾರಿ ಮುದ್ರಣ ಯಂತ್ರವನ್ನು ಖರೀದಿಸಿದರು. ಮುರುಕು ಸೈಕಲ್‌ಮೇಲೆತಿರುಗಾಡಿಬಾಡಿಗೆಮನೆಯಲ್ಲಿ ಜೀವನ ಸಾಗಿಸಿ ಈ ಶ್ರೇಷ್ಠ ಕೆಲಸವನ್ನು ಮಾಡಿದರು. ಸುಮಾರು 250 ವಚನಕಾರರ ಸಾಹಿತ್ಯವನ್ನು ಸಂಶೋಧಿಸಿ ಪ್ರಕಟಿಸಿದರು. ಅವರು ಈ ಕಾರ್ಯ ಮಾಡದೇ ಹೋದಲ್ಲಿ ಜನಸಾಮಾನ್ಯರಿಗೆ ಶರಣರ ವಚನಗಳ ನೈಜ ಪರಿಚಯವೇ ಆಗುತ್ತಿರಲಿಲ್ಲ, ಅವರ ಬದುಕಿನ ಆದರ್ಶಗಳನ್ನು ನಾವೆಲ್ಲರೂ ಅನುಸರಿಸುವ ಅಗತ್ಯ ಇದೆ ಎಂದು ತಿಳಿಸಿದರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಶೀಲ್ದಾರ್ ಡಾ.ವಿನಯಾ ಹೂಗಾರ,ಹಳಕಟ್ಟಿಅವರುಕೇವಲವಚನಗಳ ಸಂರಕ್ಷಣೆ ಹಾಗೂ ಬೆಳೆಸುವ ಕಾರ್ಯವನ್ನು ಮಾತ್ರ ಮಾಡಲಿಲ್ಲ. ಅವರೊಬ್ಬ ಶ್ರೇಷ್ಠ ಸಮಾಜಸೇವಕರಾಗಿದ್ದರು. ವಿಜಯಪುರ ನಗರದ ಭೂತನಾಳ ಕೆರೆ ನಿರ್ಮಾಣ, ಸಿದ್ದೇಶ್ವರ ಸಹಕಾರಿ ಸಂಘ, ಬಿಎಲ್‌ಡಿಇ ಶಿಕ್ಷಣ ಸಂಸ್ಥೆ ಸ್ಥಾಪನೆ ಹಾಗೂ ಮಹಿಳೆಯರಿಗಾಗಿ ಮೂರು ಶಾಲೆಗಳ ನಿರ್ಮಾಣ ಮಾಡಿದ್ದರು ಎಂದು ಸ್ಮರಿಸಿದರು.
ಫ.ಗು.ಹಳಕಟ್ಟಿ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.
ಡಾ.ಶ್ರೀಶೈಲ ಹುಕ್ಕೇರಿ, ಜಿ.ಜಿ.ಮದರಕಲ್ಲ, ಇಸಿಓ ಸುರೇಶ ಹಿರೇಮಠ, ಸಿಆರ್ ಪಿಗಳಾದ ರಾಜು ವಿಜಾಪುರ ಮತ್ತು ಸಂಗಮೇಶ ಪಾಲ್ಕಿ, ಈರಣ್ಣ ಕಲಬುರ್ಗಿ, ಶಿವಲಿಂಗಪ್ಪ ಪಾಲ್ಕಿ, ಮಹಾಂತೇಶ ಮುರಾಳ, ಜಗದೀಶ ಬಿಳೆಭಾವಿ, ಅಶೋಕ ಚಿನಗುಡಿ, ಪ್ರಭು ಸಣ್ಣಕ್ಕಿ, ಅನಿತಾ ಸಜ್ಜನ, ಮಹಾನಂದ ಉಮರ್ಜಿ, ಸುಮಂಗಲಾ, ಶೈಲಶ್ರೀ ಕಂಚಾಣಿ, ಮಹಾಂತಗೌಡ ದೊರೆಗೋಳ, ಮುನ್ನಾ ಅತ್ತಾರ, ಭಾಗವಹಿಸಿದ್ದರು.

# ಅಶೋಕ ಚಂದರಗಿ ಅವರಿಗೆ ಸನ್ಮಾನ



**ಬೆಂಗಳೂರು :** ಸೋಮವಾರ ಇಲ್ಲಿ ನಡೆದ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪ್ರಾಧಿಕಾರದ ಸದಸ್ಯ," ಚಂಪಾ ಸಿರಿಗನ್ನಡ ಪ್ರಶಸ್ತಿ" ವಿಜೇತ ಅಶೋಕ ಚಂದರಗಿ ಅವರನ್ನು ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹಾಗೂ ಸದಸ್ಯರು ಸೇರಿ ಸನ್ಮಾನಿಸಿದರು. ರಾಜ್ಯ ಯೋಜನಾ ಇಲಾಖೆ ನಿರ್ದೇಶಕ ಚಂದ್ರಶೇಖರಯ್ಯ, ಪ್ರಾಧಿಕಾರದ ಕಾರ್ಯದರ್ಶಿ ಶ್ರೀಮತ್ತಿಹಳ್ಳಿ ಪ್ರಕಾಶ ಹಾಗೂ ಇತರ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತ–ರಿದ್ದರು.

# ಚಂದ್ರಕಾಂತ ಹೊಸೂರರಿಗೆ ನಾಗಲೋಟಿಮಠ ಪ್ರಶಸ್ತಿ

**ಬನಹಟ್ಟಿ :** ಸಮೀಪದ ಯಲ್ಲಟ್ಟಿಯ ಕೊಣ್ಣೂರ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಕನ್ನಡ ಭಾಷೆಯ ಉಪನ್ಯಾಸಕ, ಸಾಹಿತಿ ಚಂದ್ರಕಾಂತ ಹೊಸೂರ ಅವ–ರಿಗೆ ಬನಹಟ್ಟಿ ಮಕ್ಕಳ ಸಂಗಮ ಕೊಡಮಾಡುವ ಡಾ. ಸ. ಜ. ನಾಗಲೋಟಿಮಠ ಶ್ರೇಷ್ಠ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಮಕ್ಕಳ ಸಂಗಮದ ಅಧ್ಯಕ್ಷ ಜಯವಂತ ಕಾಡದೇವರ ತಿಳಿಸಿದರು. ಜುಲೈ 19 ರಂದು ಬೆಳಿಗ್ಗೆ ಹನ್ನೊಂದಕ್ಕೆಜಮಖಂಡಿಯ ಬಾಲಕರ ಸರ್ಕಾರಿ ಪಿ. ಬಿ. ಪದವಿ ಪೂರ್ವ ಕಾಲೇಜಿ ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ. ಮಹಾವಿದ್ಯಾಲಯದ ಪ್ರಾಚಾರ್ಯ ಸುರೇಶ ಬಿರಾದಾರ ಅಧ್ಯಕ್ಷತೆ ವಹಿಸಲಿದ್ದು, ರಬಕವಿಯ ಅರವಳಿಕೆ ತಜ್ಞವೈದ್ಯ ರವಿ ಜಮಖಂಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಚಾಲಕ ಲಿಂಗಾನಂದ ಗವಿಮಠ ತಿಳಿಸಿದ್ದಾರೆ.

# ಜಾಗತಿಕ ಘಟನೆಗಳ ಹಿಂದೆ ಪತ್ರಿಕೆಗಳ ಮಹತ್ತರ ಪಾತ್ರವಿದೆ: ಡಾ. ಗಿರಡ್ಡಿ

**ಜಮಖಂಡಿ :** ಜಾಗತಿಕ ಮಟ್ಟದ ಎಲ್ಲ ಪ್ರಮುಖ ಘಟನೆಗಳ ಹಿಂದೆ ಪತ್ರಿಕೆಗಳದ್ದು ಮಹತ್ತರ ಪಾತ್ರ ಇರುತ್ತದೆ. ಪತ್ರಿಕೆಗಳು ಇಲ್ಲದ ಜಗತ್ತನ್ನು ಊಹಿಸಲೂ ಸಾಧ್ಯವಿಲ್ಲ. ಅಂತೆಯೇ ಕೆಲವರಿಗೆ ಪತ್ರಿಕೆಗಳನ್ನು ಓದದೆ ದಿನ ಆರಂಭ ಆಗುವುದೇ ಇಲ್ಲ ಎಂದು ಬಸವಜ್ಯೋತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಹೇಳಿದರು.
ಸ್ಥಳೀಯ ರೋಟರಿ ಸಂಸ್ಥೆಯ ಆಶ್ರಯದಲ್ಲಿ ಇಲ್ಲಿನ ವಿಜಯಪುರ ರಸ್ತೆ ಪಕ್ಕದ ರೋಟರಿ ಭವನದಲ್ಲಿ ಶುಕ್ರವಾರ ಸಂಜೆ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ, ವೈದ್ಯರ ದಿನಾಚರಣೆ, ಲೆಕ್ಕಪರಿಶೋಧಕರ ದಿನಾಚರಣೆ ಹಾಗೂ ಕಂದಾಯ ದಿನಾಚರಣೆ, ಸಾಧಕರ ಸನ್ಮಾನ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.
ಪತ್ರಕರ್ತರಲ್ಲಿ ಕುತೂಹಲ ಮತ್ತು ಸುದ್ದಿಯ ಹಸಿವು ಇರಬೇಕು. ಸರಿಯಾಗಿ ಬರೆಯುವ, ಪರಿಣಾಮಕಾರಿಯಾಗಿ ಮಾತನಾಡುವ ಮತ್ತು ಗಮನವಿಟ್ಟು ಕೇಳುವ ಗುಣಗಳು ಇರಬೇಕು. ಸಮಾಜದ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ ಪತ್ರಕರ್ತರು ಸ್ವಯಂ ಬೇಲಿ ಹಾಕಿಕೊಳ್ಳಬೇಕು ಎಂದರು.
ಎಲುಬು ಮತ್ತು ಕೀಲು ತಜ್ಞ ಡಾ. ಜಿ. ಎನ್. ಸನದಿ ಮಾತನಾಡಿ, ವೈದ್ಯರುಗಳು ಇನ್ನಷ್ಟು ಹೆಚ್ಚಿನ ಸೇವೆ ಒದಗಿಸಲು ಪ್ರೇರಣೆ ನೀಡುವ ಉದ್ದೇಶದಿಂದ ವೈದ್ಯರ ದಿನಾಚರಣೆ ಆಚರಿಸಲಾಗುತ್ತದೆ. ವೈದ್ಯಕೀಯ ದಿನಾಚರಣೆ ನಿಮಿತ್ಯ ಉಚಿತ ವೈದ್ಯಕೀಯ ತಪಾಸಣೆ, ರಕ್ತದಾನ ಶಿಬಿರ ಇತ್ಯಾದಿ ಕಾರ್ಯಕ್ರಮಗಳು ಜರುಗುತ್ತವೆ ಎಂದರು. ಲೆಕ್ಕಪರಿಶೋಧಕ ನಂದನ ಭುತಡಾ, ಕಂದಾಯ ಅಧಿಕಾರಿ ಬಸವರಾಜ ತಾಳಿಕೋಟಿ, ರೋಟರಿ ಸಂಸ್ಥೆಯ ಆರ್. ಪಿ. ನ್ಯಾಮಗೌಡ ಮಾತನಾಡಿದರು. ವಿಶೇಷ ಸಾಧನೆಗೈದ ವೈದ್ಯರುಗಳು, ಪತ್ರಕರ್ತರು, ಲೆಕ್ಕಪರಿಶೋಧಕರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.
ರೋಟರಿ ಸಂಸ್ಥೆಯ ಅಧ್ಯಕ್ಷ ರಾಜಶೇಖರ ಕೋವಳ್ಳಿ ಸ್ವಾಗತಿಸಿದರು. ಪಿ. ಡಿ. ಗೌಡರ, ಬಸವರಾಜ ಆಲಗೂರ, ಸಂತೋಷ ಹಿರೇಮಠ ನಿರೂಪಿಸಿದರು. ಕಾರ್ಯದರ್ಶಿ ಎಂ. ಎಚ್. ಕಡ್ಲಿಮಟ್ಟಿ ವಂದಿಸಿದರು.

# ಜಯ ಮೃತ್ಯುಂಜಯ ಶ್ರೀಗಳ ಮಾರ್ಗದರ್ಶನದಲ್ಲಿ ಸಮಾಜ ಕಟ್ಟುತ್ತೇನೆ: ವಿಶ್ವನಾಥ ಮರಿಬಸಪ್ಪನವರ



**ಕುಕನೂರು :** ವೀರ ರಾಣಿ ಕಿತ್ತೂರು ಚೆನ್ನಮ್ಮನವರ ಒಗ್ಗಟ್ಟಿನಮಂತ್ರ,ಪಂಚಮಸಾಲಿಜಯಮೃತ್ಯುಂಜಯ ಶ್ರೀಗಳ ಮಾರ್ಗದರ್ಶನದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಸಮಾಜ ಕಟ್ಟುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಪಂಚ ಸೇನಾ ಕೊಪ್ಪಳ ಜಿಲ್ಲಾಧ್ಯಕ್ಷ ವಿಶ್ವನಾಥ ಮರಿಬಸಪ್ಪನವರ ಹೇಳಿದರು.
ಕೊಪ್ಪಳಜಿಲ್ಲೆಯಕುಕನೂರತಾಲೂಕಿನಮಂಗಳೂರು ಗ್ರಾಮದ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ವಿಶ್ವನಾಥ ಮರಿಬಸಪ್ಪನವರ ಮಾತನಾಡಿ, ರಾಷ್ಟ್ರ ಮಾತೇ, ವೀರರಾಣಿ ಕಿತ್ತೂರು ಚೆನ್ನಮ್ಮನವರ ವಂಶಸ್ಥರು ಇಡೀ ರಾಷ್ಟ್ರದ ತುಂಬಾ ಇದ್ದಾರೆ.
ರಾಜ್ಯ ಮತ್ತು ಪ್ರತೀ ಜಿಲ್ಲೆಯಲ್ಲಿ ಪಂಚಮಸಾಲಿ ಸಮುದಾಯದ ಒಗ್ಗಟ್ಟಿಗೆ ಕೂಡಲ ಸಂಗಮ ಪೀಠದ ಜಯ ಮೃತ್ಯುಂಜಯ ಶ್ರೀಗಳು ಶ್ರಮಿಸುತ್ತಿದ್ದಾರೆ.
ಈ ಸಮುದಾಯಕ್ಕೆ 2 ಎ ಮೀಸಲಾತಿ ದೊರಕಿಸಿಕೊಡಬೇಕೆಂಬುದು ಶ್ರೀಗಳ ಮುಖ್ಯ ಉದ್ದೇಶವಾಗಿದ್ದು ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯಿಂದಲೂ ಸಮಾಜದಿಂದ ಒಗ್ಗಟ್ಟಿನ ಹೋರಾಟದೊಂದಿಗೆ ಶ್ರೀಗಳ ಮಾರ್ಗದರ್ಶನದಲ್ಲಿ ನಡೆಯುತ್ತವೆ ಎಂದು ವಿಶ್ವನಾಥ ಮರಿಬಸಪ್ಪನವರ ಹೇಳಿದರು.
ರಾಷ್ಟ್ರೀಯ ಅಧ್ಯಕ್ಷ ಬಿ ಎಸ್. ಪಾಟೀಲ ಮತ್ತು ರಾಜ್ಯಾಧ್ಯಕ್ಷ ರುದ್ರಗೌಡ್ರ ಸೊಲಬಗೌಡ್ರ ಹಾಗೂ ಪರಮ ಪೂಜ್ಯ ಜಯ ಮೃತ್ಯುಂಜಯ ಶ್ರೀಗಳು ನನಗೆ ಜಿಲ್ಲಾಧ್ಯಕ್ಷ ಸ್ಥಾನದ ದೊಡ್ಡ ಜವಾಬ್ದಾರಿ ನೀಡಿದ್ದು, ಪಂಚಮಸಾಲಿ ಸಮಾಜದ ಋಣ ತೀರಿಸಲು ಇತರ ಸಮಾಜದೊಂದಿಗೆ
ಸಹೋದರತ್ವ ಭಾವನೆಯೊಂದಿಗೆ ಪಂಚಮಸಾಲಿ ಸಮಾಜದಲ್ಲಿ ಒಗ್ಗಟ್ಟಿನೊಂದಿಗೆ 2 ಎ ಮೀಸಲಾತಿ ಪಡೆಯಲು ಹಾಗೂ ಸಮಾಜದ ಪ್ರತಿಭಾವಂತರನ್ನು ಪುರಸ್ಕರಿಸುವ ಕಾರ್ಯವನ್ನು ಮಾಡುತ್ತೇನೆ ಎಂದು ಪಂಚಮ ಸೇನಾ ಕೊಪ್ಪಳ ಜಿಲ್ಲಾಧ್ಯಕ್ಷ ವಿಶ್ವನಾಥ ಮರಿಬಸಪ್ಪನವರ ಹೇಳಿದರು.
ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಮಾಧ್ಯಮ ವಕ್ತಾರ ರವೀಂದ್ರನಾಥ ತೋಟದ, ಅನಿಲ ಕಲ್ಲಭಾವಿ, ಪ್ರಸನ್ನ ಅರಳಲೆಹಿರೇಮಠ ಇದ್ದರು.

# ಮಾದಕ ದ್ರವ್ಯಗಳ ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ



**ಹಳ್ಳೂರ :** ಬೀದಿ ನಾಟಕ ಪ್ರದರ್ಶನ ಮಾಡುವುದರಿಂದ ಜನರಿಗೆ ತಿಳಿವಳಿಕೆ ನೀಡಿ ಗ್ರಾಮದ ಸುಧಾರಣೆಗೆ ಸಹಕಾ–ರಿಯಾಗುತ್ತದೆ. ಶೌಚಾಲಯ ನಿರ್ಮಾಣ, ಅನಕ್ಷರತೆ, ಹೆಣ್ಣು ಗಂಡು ಬೇಧ ಭಾವ, ಹೆಣ್ಣು ಅಬಲೆ ಅಲ್ಲ ಸಬಲೆ, ಮಾದಕ ದ್ರವ್ಯಗಳ ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ, ಬಾಲ್ಯ ವಿವಾಹ ನಿಷೇಧ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಹೀಗೆ ಅನೇಕ ಬಗೆಯ ಸತ್ಯ ಸಂಗತಿಗಳನ್ನು ಬೀದಿ ನಾಟಕ ಪ್ರದರ್ಶನ ಮಾಡುವುದರ ಮೂಲಕ ಜನರಿಗೆ ತಿಳಿವಳಿಕೆ ನೀಡಿದ್ದು ಮೆಚ್ಚುವಂತಹದ್ದು ಎಂದು ಮು–ರಿಗೆಪ್ಪ ಮಾಲಗಾರ ಹೇಳಿದರು.
ಅವರು ಶಿವಾಪೂರ ಗ್ರಾಮದವರು ಶ್ರೀ ಮಹಾಲಕ್ಷ್ಮಿ ದೇವಾಲಯದಲ್ಲಿನಡೆದಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಲ್ಲಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಮಾಜ ಸುಧಾರಣೆಗಾಗಿ ಬಡ ಜನರ ಜೀವನ ಮಟ್ಟ ಉದ್ದಾರವಾಗುತ್ತಿದೆ ಎಂದು ಹೇಳಿದರು.
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕಾ ಯೋಜನಾದಿಕಾರಿ ರಾಜು ನಾಯ್ಕ ಮಾತನಾಡಿ ಬೀದಿ ನಾಟಕ ಪ್ರದರ್ಶನ ಮಾಡುವುದು ಗ್ರಾಮಕ್ಕೆ ಬಂದು ಶೌಚಾಲಯ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು .ಹೆಣ್ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ಬಾಲ್ಯ ವಿವಾಹ ಆಗೋದು ನಿಲ್ಲಿಸಬೇಕು ಸರಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಜನರಿಗೆ ತಿಳಿವಳಿಕೆ ನೀಡಬೇಕು ಮಕ್ಕಳ ಕೈಗೆ ಮೊಬೈಲ್ ಕೊಡುವುದನ್ನು ತಪ್ಪಿಸಿ ವಿದ್ಯಾವಂತರನ್ನಾಗಿ ಮಾಡಿರಿ ಆರೋಗ್ಯವನ್ನು ಕಡೆಗಣಿಸದೆ ಲಕ್ಷ್ಯ ಕೊಟ್ಟು ರಕ್ಷಣೆ ಮಾಡಿಕೊಳ್ಳಿರಿ
ಎಲ್ಲರೂ ಸರಕಾರದ ಸೌಲಭ್ಯ ಪಡೆದುಕೊಳ್ಳಿರೆಂದು ಹೇಳಿದರು.
ಈ ಸಮಯದಲ್ಲಿ ಗ್ರಾಂ ಪ ಸದಸ್ಯ ಮಲ್ಲಪ್ಪ ಢವಳೇಶ್ವರ. ದೇವಕಿ ರಬಕವಿ.ರೇವಣ ಪಾಟೀಲ. ವಿಜಯಲಕ್ಷ್ಮಿ ಮೂರನಾಳ. ಕಸ್ತೂರಿ ಸವದಿ.ಕೌಸರ ಹಣಗಂಡಿ.ಭರತ್ ಕಲಾ ಚಂದ್ರ.ಪ್ರಕಾಶ ಜನಮಟ್ಟಿ. ಸಂತ್ರಾಮ ಮಯೂರ. ಪುಂಡಲೀಕ ನಾಯ್ಕ. ಮಹೇಶ ಪಕಾಲೆ. ಶಂಕರ ಖೋತ.ಸಾವಿತ್ರಿ ಹಳಕಲ್. ಸುಜಾತಾ ಮಗದುಮ್.ಸೇರಿದಂತೆ ಅನೇಕರಿದ್ದರು.

# ಶೀಘ್ರದಲ್ಲೇ ಗಡಿಗಿ ಚೆನ್ನಪ್ಪ ವೃತ್ತ ಉದ್ಘಾಟನೆ: ಭರತ್ ರೆಡ್ಡಿ



**ಬಳ್ಳಾರಿ :** ನಗರದ ಹೃದಯ ಭಾಗದಲ್ಲಿರುವ ಗಡಿಗಿ ಚೆನ್ನಪ್ಪ ವೃತ್ತವನ್ನು ಅತ್ಯಂತ ಉತ್ತಮವಾದ ಗುಣಮಟ್ಟದಲ್ಲಿ ಕಾಮಗಾರಿಯನ್ನು ನಡೆಸಲಾಗುತ್ತಿದೆ ನಗರದ ಜನರು ಸ್ವಲ್ಪ ತಾಳ್ಮೆಯಿಂದ ಇರಬೇಕು, ಒಂದನ್ನು ಪಡೆಯಬೇಕಾದರೆ ಇನ್ನೊಂದನ್ನು ಕಳೆದುಕೊಳ್ಳಲೇಬೇಕು.
ಅದೇ ರೀತಿ ಗುಣಮಟ್ಟದ ಕಾಮಗಾರಿ ಬೇಕಾದಲ್ಲಿ ಸಂಚಾರದಲ್ಲಿ ಸಮಸ್ಯೆ ಕಾಣುವುದು ಸಹಜ ಸಾರ್ವಜನಿಕರು ಸಹಕರಿಸಬೇಕು ಯಾರೇ ಏನೇ ಒತ್ತಡ ಹಾಕಿದರೂ ಗಡಿಗಿ ಚನ್ನಪ್ಪ ವೃತ್ತವನ್ನು ಉತ್ತಮ ಗುಣಮಟ್ಟದಿಂದ ಸಂಪೂರ್ಣ ಕಾಮಗಾರಿ ಮುಗಿಸಲಾಗುವುದು ಎಂದು ಶಾಸಕ ನಾರಾ ಭರತ್ ರೆಡ್ಡಿ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.
ಗಡಿಗಿ ಚೆನ್ನಪ್ಪ ವೃತ್ತದ ಉದ್ಘಾಟನೆ ಉದ್ದೇಶವಾಗಿ ಮುಂದೂಡುತ್ತಿಲ್ಲ, ಕಾಮಗಾರಿ ನಡೆಸಲು ಸ್ವಲ್ಪ ವಿಳಂಬವಾಗುತ್ತಿದೆ ಮತ್ತು ಕಾಮಗಾರಿ ತಡವಾಗಿ ನಡೆಯಲು ಹಲವು ಕಾರಣಗಳಿವೆ, ಕೆಲವರು ಕೋರ್ಟ್ ಮೊರೆ ಹೋಗಿದ್ದಾರೆ, ಕೆಲ ಕಾಮಗಾರಿಗೆ ಸರ್ಕಾರದ ಅನಮೋದನೆ ವಿಳಂಬ ಆಗಿದೆ, ಆದ್ದರಿಂದ ಗಡಿಗಿ ಚನ್ನಪ್ಪ ವೃತ್ತ ಉದ್ಘಾಟನೆ ತಡವಾಗಿದೆ, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕು, ಶಾಶ್ವತ ಕಾಮಗಾರಿ ಆಗಿರುವ ಕಾರಣ ಉತ್ತಮ ರೀತಿಯಲ್ಲೇ ಮಾಡಬೇಕಾಗಿದೆ, ಆದಷ್ಟು ಶೀಘ್ರದಲ್ಲೇ ವೃತ್ತವನ್ನು ಉದ್ಘಾಟನೆ ಮಾಡಲಾಗುವುದು ಎಂದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618